ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2014 ಮಾಸ ಪತ್ರಿಕೆ

ಸಂಪುಟ : 37

ಸಂಚಿಕೆ : 3

ಪುಟ : 16

ಬೆಲೆ : ₹ 5/-





## ಅಖಿಲ ಭಾರತೀಯ ವಿದ್ವತ್ ಗೋಷ್ಠಿ

ಚಿತ್ರ 1: ಎ-ಬ: ಇಂದುಮತಿ ಕಾಟದರೆ; ದೇವನಾಥನ್; ಮೋಹನ್‌ಜೀ ಭಾಗವತ್ ಹಾಗೂ ಸುರೇಶ್‌ಜೀ ಸೋನಿ.

ಚಿತ್ರ 2: ನಾಗಪುರ ವಿದ್ವತ್ ಗೋಷ್ಠಿಯಲ್ಲಿ ಭಾಗವಹಿಸಿದ ವಿದ್ವಾಂಸರು.)






## ಗಣಿತ ಕಾರ್ಯಾಗಾರ

ಅತಿಥಿಗಳಾದ ಡಾ|| ಗಣೇಶ್ ಭಟ್, ಡಾ|| ರುಕ್ಮಾಂಗದಾ ನಾಯ್ಡು, ಶ್ರೀಮತಿ ಸೀತಾಲಕ್ಷ್ಮಿ, ಶ್ರೀಮತಿ ವರಲಕ್ಷ್ಮಿ ಹಾಗೂ ಶ್ರೀಮತಿ ಮಾಲಿನಿ


ವಿವೇಕಾನಂದರ ಕನಸು ನನಸಾಗುವುದು ಹೇಗೆ ? 5

6 ಭ್ರಷ್ಟಾಚಾರ-ಅತ್ಯಾಚಾರದ ಬಿಡುಗಡೆಯ ಹಾದಿ

ಪದವಿಯೋ ಜೀವನ ಕಲೆಯೋ ? 7

12 ಜೀವನ ಮೌಲ್ಯಗಳ ಕಾರ್ಯಾಗಾರಕ್ಕಾಗಿ ಆಗ್ರಹ

# ಸಂಪಾದಕೀಯ

ಸಂಗೀತ, ಸಾಹಿತ್ಯ ಮನುಷ್ಯನ ಬದುಕನ್ನು ಉಲ್ಲಸಿತವಾಗಿಸುತ್ತದೆ. ಸಂಗೀತ ಸುಧೆಗೆ ಮನಸೋಲದವರು ಬಹುಶಃ ಅತಿ ವಿರಳ. ಸಂಗೀತವು ಜೀವನದ ಕಷ್ಟಕಾರ್ಪಣ್ಯಗಳನ್ನು ಮರೆಸಿ ಹೊಸ ಉತ್ಸಾಹ, ಚೈತನ್ಯವನ್ನು ತುಂಬುತ್ತದೆ. ಸಂಗೀತಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಅದ್ಭುತ ಸಾಧನೆಗಳನ್ನು ಮಾಡಿದ ಮಹನೀಯರು ಅನೇಕರು ನಮ್ಮ ನಾಡಿನವರು ಎಂಬುದು ಹೆಮ್ಮೆಯ ವಿಷಯ. ಅಂತಹ ಸಾಧಕರಲ್ಲಿ ಸಂತ ತ್ಯಾಗರಾಜರು ಪ್ರಾತಃ ಸ್ಮರಣೀಯರು. ಕರ್ನಾಟಕ ಸಂಗೀತಕ್ಕೆ ತ್ಯಾಗರಾಜರ ಕೊಡುಗೆ ಅಪಾರ. ಜನವರಿ 10 ತ್ಯಾಗರಾಜರ ಆರಾಧನೆ. ಈ ಸಂದರ್ಭದಲ್ಲಿ ಅವರ ಕೀರ್ತನೆಗಳನ್ನು ಕೇಳಿ, ಓದಿ ನಮ್ಮ ಮನಸ್ಸನ್ನು ಉಲ್ಲಸಿತ ಗೊಳಿಸಿಕೊಳ್ಳೋಣ.

ಜನವರಿ 12 ರಾಷ್ಟ್ರೀಯ ಯುವ ದಿನಾಚರಣೆ. ಸ್ವಾಮಿ ವಿವೇಕಾನಂದರ ಜನ್ಮದಿನ. ಸ್ವಾಮಿ ವಿವೇಕಾನಂದರ ಹೆಸರೇ ಸ್ಫೂರ್ತಿದಾಯಕ. ಅವರ ವಿಚಾರಗಳು, ನುಡಿಗಳು ಎಂಥವರನ್ನಾದರೂ ಬಡಿದೆಬ್ಬಿಸುವ ಶಕ್ತಿಯನ್ನು ಹೊಂದಿದೆ. ಈ ವರ್ಷ ವಿವೇಕಾನಂದರ ಜನ್ಮದಿನದಂದು ನಮ್ಮ ಕೆಲವು ಯುವಕರು ವಿವೇಕ ಕಂಕಣವನ್ನು ಶಾಲಾ ಕಾಲೇಜುಗಳಲ್ಲಿ ಕಟ್ಟುವ ಯೋಜನೆಯನ್ನು ರೂಪಿಸುತ್ತಿರುವುದು ಸಂತೋಷದ ಸಂಗತಿ. ಈ ಕಂಕಣದೊಂದಿಗೆ ವಿವೇಕಾನಂದರ ವಿಚಾರಗಳನ್ನು ಅಂದು ಶಾಲಾ ಕಾಲೇಜುಗಳಲ್ಲಿ ಯುವ ಪೀಳಿಗೆಗೆ ಮುಟ್ಟಿಸಿದರೆ ಸಮಾಜಕ್ಕೆ ಸನ್ನಡತೆಯ, ಸದ್ವಿಚಾರದ ಯುವಕರನ್ನು ಸಮಾಜಕ್ಕೆ ನೀಡುವ ಒಳ್ಳೆಯ ಪ್ರಯತ್ನವಾಗುತ್ತದೆ.

ಪ್ರತಿ ವರ್ಷವೂ ಡಿಸೆಂಬರ್ 24 ರಂದು ರಾಷ್ಟ್ರೀಯ ಗ್ರಾಹಕ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಅಂದು ಗ್ರಾಹಕ ಇಲಾಖೆಯು ಒಂದು ಸಮಾರಂಭವನ್ನು ನಡೆಸಿ ಸುಮ್ಮನಾಗುತ್ತದೆ. ಗ್ರಾಹಕ ದಿನಾಚರಣೆಯ ಸ್ವಲ್ಪ ದಿನಗಳ ಹಿಂದೆ ಮುಂದೆ ಟಿ.ವಿ. ಪತ್ರಿಕೆಗಳಲ್ಲಿ ಗ್ರಾಹಕರನ್ನು ಎಚ್ಚರಿಸುವ ಜಾಹಿರಾತು ಕಾಣಿಸಿಕೊಳ್ಳುತ್ತದೆ. ಆದರೆ ನಿರಂತರ ನಡೆಯುವ ಗ್ರಾಹಕರ ಶೋಷಣೆಯ ಬಗ್ಗೆ ಇಲಾಖೆಯೂ ಸೇರಿದಂತೆ ಯಾರೂ ಗಂಭೀರವಾಗಿ ಕಾರ್ಯಪ್ರವೃತ್ತರಾಗುವುದು ಕಂಡುಬರುವುದಿಲ್ಲ. ಶಾಲೆಗಳಲ್ಲಿ ಗ್ರಾಹಕ ಸಂಘಗಳನ್ನು ಸ್ಥಾಪಿಸುವಂತೆ ಗ್ರಾಹಕ ಇಲಾಖೆ ಕೆಲವು ವರ್ಷಗಳ ಹಿಂದೆ ಆದೇಶಿಸಿತು. ಬಹುಶಃ ಶಾಲೆಗಳ ಗ್ರಾಹಕ ಸಂಘಗಳು ಕೇವಲ ನಾಮಕಾವಸ್ಥೆಗಳಾಗಿವೆ. ವಿದ್ಯಾರ್ಥಿಗಳಿಗೆ, ಆ ಮೂಲಕ ಸಮಾಜಕ್ಕೆ ಗ್ರಾಹಕ ಜಾಗೃತಿಯನ್ನು ಉಂಟುಮಾಡುವುದು ಅವಶ್ಯವಲ್ಲವೇ? ಆ ಬಗ್ಗೆ ಶಿಕ್ಷಕರು ಗಮನ ಹರಿಸಿ ಕಾರ್ಯಪ್ರವೃತ್ತರಾಗುವರೆಂದು ಈ ಮೂಲಕ ಆಶಿಸೋಣ.

2014 ಹಿಂದೆ ಸರಿದು 2015 ಇನ್ನೇನು ಕಾಲಿಡಲಿದೆ. 2015 ಅನ್ನು ಸ್ವಾಗತಿಸುತ್ತ ಶಿಕ್ಷಕ ಸಮಾಚಾರದ ಎಲ್ಲ ಚಂದಾದಾರರಿಗೆ, ಶಿಕ್ಷಕರಿಗೆ ಶುಭಾಶಯಗಳನ್ನು ಕೋರುತ್ತೇವೆ. ಆದರೆ ಮಾರ್ಚ್ 21 ಯುಗಾದಿ. ಅಂದು ನಾವೆಲ್ಲ ಸಂಭ್ರಮದಿಂದ ಹೊಸ ವರ್ಷವನ್ನು ಬೇವು ಬೆಲ್ಲ ವಿನಿಮಯದೊಂದಿಗೆ ಆದರಿಸೋಣ.

ಸಂಪಾದಕರು



ಈ ಮಾನವ ದೇಹ ಲಭಿಸಿದ್ದರಿಂದ ನೀನು ಅದೃಷ್ಟಶಾಲಿ.
ಎಷ್ಟು ಸಾಧ್ಯವೋ ಅಷ್ಟು ದೇವರಿಗೆ ಪ್ರಾರ್ಥನೆ ಸಲ್ಲಿಸು.
ನೀನು ಕಠಿಣ ಶ್ರಮ ವಹಿಸಿ ಕೆಲಸ ಮಾಡಬೇಕು.
ಶ್ರಮವಿಲ್ಲದೆ ಏನನ್ನೂ ಪಡೆಯಲಾಗದು.

- ಶ್ರೀಮಾತೆ ಶಾರದಾದೇವಿ

## ಪರಿವಿಡಿ


- ಇದು ಸರಿಯೇ? 3
- ಅಖಿಲ ಭಾರತೀಯ ವಿದ್ವತ್ ಗೋಷ್ಠಿ 4
- ವಿವೇಕಾನಂದರ ಕನಸು ನನಸಾಗುವುದು ಹೇಗೆ ? 5
- ಭ್ರಷ್ಟಾಚಾರ–ಅತ್ಯಾಚಾರದ ಬಿಡುಗಡೆಯ ಹಾದಿ 6
- ಪದವಿಯೋ ಜೀವನ ಕಲೆಯೋ ? 7
- ಹುಲಿ ಸತ್ತರೆ ಮನುಷ್ಯ ಸಾಯುತ್ತಾನೆಯೇ ? 8
- ಸಂಕಲ್ಪ 9
- 'ಫಲ' ಸೇವನೆ 10
- ಸುಭಾಷ್‌ಚಂದ್ರ ಬೋಸ್‌ರು ಬಂಗಾಳದ ಗವರ್ನರ್‌ಗೆ ಬರೆದ ಪತ್ರ 11
- ಶಿಕ್ಷಕರಿಗೆ ಸಂಕಲ್ಪ ದಿನ ಹೇಗೆ? 11
- ಜೀವನ ಮೌಲ್ಯಗಳ ಕಾರ್ಯಾಗಾರಕ್ಕಾಗಿ ಆಗ್ರಹ 12
- ವಿದ್ಯಾರ್ಥಿ ಮಿತ್ರ – 14 14
- ಸಾಧಕರನ್ನು ಸ್ಮರಿಸೋಣ 15

# ಇದು ಸರಿಯೇ?



**ಅರುಣ ಶಹಾಪೂರ,** MLC
ರಾಜ್ಯ ಕಾರ್ಯಾಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

ಎಲ್ಲೋ ಕೆಲವು ಶಾಲೆಗಳಲ್ಲಿ ನಡೆಯುವ ಘಟನೆಗಳ ಹಿನ್ನೆಲೆಯಲ್ಲಿ ಇಡೀ ಶಿಕ್ಷಕ ಕುಲವನ್ನು ಅನುಮಾನದಿಂದ ನೋಡುವುದು ಸರಿಯಲ್ಲ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು ಪೋಲೀಸ್ ಇಲಾಖೆ ಸುತ್ತೋಲೆ ಹೊರಡಿಸಿದೆ ಎಂದು ವರದಿಯಾಗಿರುವುದು ಆತಂಕಕಾರಿ. ಇದೊಂದು ಅವೈಜ್ಞಾನಿಕ ಸುತ್ತೋಲೆಯಾಗಿದ್ದು ನಿಜಕ್ಕೂ ಆತ್ಮಘಾತುಕ ಚಿಂತನೆ.

ಪುರುಷ ಶಿಕ್ಷಕರ ವಿಳಾಸ, ಭಾವಚಿತ್ರ ಮೊಬೈಲ್ ಸಂಖ್ಯೆ ಸೇರಿದಂತೆ ಪೂರ್ವಾಪರ ಮಾಹಿತಿ ಸಂಗ್ರಹಿಸುವ, ಅವರ ನಿವಾಸಗಳಿಗೆ ಭೇಟಿ ನೀಡುವ ಹಾಗೂ ಅವರ ಬಗ್ಗೆ ಸುತ್ತಮುತ್ತಲಿನವರನ್ನು ವಿಚಾರಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದಿರುವುದು ಖಂಡನಾರ್ಹವಾಗಿದ್ದು, ಅತ್ಯಾಚಾರದಂತಹ ಪ್ರಕರಣದಲ್ಲಿ ಶಿಕ್ಷಕರ ಸಹಭಾಗಿತ್ವ ಖಂಡಿತ ಅಕ್ಷಮ್ಯ. ಆದರೆ ಕೆಲವರು ಮಾಡಿದ ಕೃತ್ಯಕ್ಕೆ ಇಡೀ ಶಿಕ್ಷಕ ಕುಲವನ್ನೇ ಅಪರಾಧಿ ಸ್ಥಾನದಲ್ಲಿಟ್ಟು ನೋಡುವುದು ಘೋರ ಅಕ್ಷಮ್ಯ. ಶಿಕ್ಷಣ ಕ್ಷೇತ್ರದಲ್ಲಿ ನೈತಿಕ ಅಧಃಪತನ ವ್ಯಕ್ತಿಗಳು ನುಸುಳಿರುವುದಕ್ಕೆ ಪರಿಹಾರ ಕ್ರಮವಾಗಿ ಇಡೀ ಶಿಕ್ಷಣ ಸಮುದಾಯದ ಕುರಿತು ಶ್ರದ್ಧಾ ಭಂಗವಾಗುವ ರೀತಿ ಕಾನೂನು ಹಾಗೂ ನಿಯಮಾವಳಿಗಳ ಜಾರಿ ಬೇಡ. ಇದೆಲ್ಲದಕ್ಕೂ ಹೆಚ್ಚಿನದಾಗಿ ರಾಜ್ಯದ ಮುಖ್ಯಮಂತ್ರಿಗಳೇ ಚಿತ್ರದುರ್ಗದಲ್ಲಿ ಹೇಳಿಕೆ ನೀಡಿ ಹೆಣ್ಣು ಮಕ್ಕಳು ಇರುವ ಕಡೆ ಪುರುಷ ಶಿಕ್ಷಕರು ಬೇಡ ಎಂಬ ಹೇಳಿಕೆ ನೀಡಿದ್ದು, ನೆಗಡಿಯಾದರೆ ಚಿಕಿತ್ಸೆ ಬೇಡ ಮೂಗನ್ನೇ ಕೊಯ್ದುಕೊಳ್ಳುವಂತೆ ನಿರ್ಣಯವಾಗುತ್ತದೆ. ಮಕ್ಕಳ ಮೇಲೆ ಅತ್ಯಾಚಾರ ಮಾಡುವವರು ಪೈಶಾಚಿಕ ಮನೋವೃತ್ತಿಯವರು. ಇದೊಂದು ಮನೋವೈಜ್ಞಾನಿಕ ಸಮಸ್ಯೆಯಾಗಿದ್ದು ಈ ಕುರಿತು ಮನಃಶಾಸ್ತ್ರೀಯ ಅಧ್ಯಯನ ನಡೆಸಬೇಕು. ಇದು ಸಾಮಾಜಿಕ ಜಾಡ್ಯ. ಇದರಿಂದ ಹೊರ ಬರಲು ಸರ್ಕಾರ ಕಾರ್ಯ ಯೋಜನೆ ಹಮ್ಮಿಕೊಳ್ಳಬೇಕು. ಶಿಕ್ಷಣದಲ್ಲಿ "ನೈತಿಕ" ಹಾಗೂ "ಜೀವನ ಮೌಲ್ಯ" ಶಿಕ್ಷಣಕ್ಕೆ ಒತ್ತು ಕೊಡಬೇಕು ಎಂದು ಈ ಮೂಲಕ ಆಗ್ರಹಿಸುತ್ತೇನೆ.

ರಾಜ್ಯದಲ್ಲಿ ಹಲವೆಡೆ ಹಾಗೂ ಶಾಲಾ ಕಾಲೇಜುಗಳಲ್ಲಿ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳನ್ನು ಸುರಕ್ಷಾ ಕ್ರಮದ ಸುತ್ತೋಲೆ ಮಾತ್ರ ಹೊರಡಿಸಿ ಸಮಿತಿ ರಚನೆ ಮಾಡಿ ಏನೋ ಘನಾಂದಾರಿ ಕಾರ್ಯ ಪೂರೈಸಿರುವ ಮನೋಭಾವದಲ್ಲಿದೆ ಸರ್ಕಾರ. ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಶಾಲೆ ಕಾಲೇಜುಗಳಲ್ಲಿ (ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ) ಕೈಗೊಂಡಿರುವ ಸುರಕ್ಷಾ ಕ್ರಮಗಳೇನು..? ಅವುಗಳಿಗೆ ಸರ್ಕಾರ ಒದಗಿಸಿರುವ ಹಣ ಎಷ್ಟು..? ಎಂಬುದನ್ನು ಬಹಿರಂಗಪಡಿಸಿ ಪುಕ್ಕಟೆ ಸುತ್ತೋಲೆ ಹೊರಡಿಸಿ ಅನುದಾನಿತ, ಅನುದಾನ ರಹಿತ ಶಾಲೆಗಳನ್ನು ಬೆದರಿಸಿ ಸುರಕ್ಷಾ ಕ್ರಮಗಳಿಗೆ ಒತ್ತಾಯಿಸಿರುವ ಸರ್ಕಾರ ಸರ್ಕಾರಿ ಶಾಲೆಗಳಿಗೆ ಸುರಕ್ಷತೆಯ ದೃಷ್ಟಿಯಿಂದ ಒದಗಿಸಿರುವ ಅನುದಾನ ಎಷ್ಟು ಎಂದು ಮಾಹಿತಿ ನೀಡಲು ಆಗ್ರಹಿಸುತ್ತೇನೆ.

ಈ ಸಮಸ್ಯೆಯನ್ನು ನಿವಾರಿಸಲು ಶಿಕ್ಷಣ ಸಂಸ್ಥೆಗಳು ಶಿಕ್ಷಕರು, ಪಾಲಕರು, ಶಿಕ್ಷಣಾಧಿಕಾರಿಗಳು, ಜನಪ್ರತಿನಿಧಿಗಳು ಎಲ್ಲರನ್ನೂ ಜಿಲ್ಲಾ ಸ್ಥರಗಳಲ್ಲಿ ಸಭೆ ಕರೆದು ವಿಶ್ವಾಸಕ್ಕೆ ತೆಗೆದುಕೊಂಡು ಈ ಸಮಸ್ಯೆಯ ವಿರುದ್ಧ ಸಂಘಟಿತ ಪ್ರಯತ್ನ ಮಾಡುವ ಅಗತ್ಯವಿದೆ. ಸುತ್ತೋಲೆಗಳ ಮೂಲಕ ಹೆದರಿಕೆ, ಬೆದರಿಕೆ ಹಾಗೂ ದಂಡ ಪ್ರಯೋಗಕ್ಕಿಂತ ಎಲ್ಲರನ್ನೊಳಗೊಂಡು ಸಮಸ್ಯೆ ಪರಿಹಾರಕ್ಕೆ ಸರ್ಕಾರ ಮುಂದಾಗಬೇಕೆಂದು ಕೋರುತ್ತೇನೆ.

---

**ಸಂ ಕ ಲ್ಪ**

**ಜನವರಿ 12 ರಿಂದ ಜನವರಿ 23 ರ ನಡುವಿನ ಅವಧಿಯಲ್ಲಿ ನಮ್ಮ ವೃತ್ತಿಗೆ ನಮ್ಮನ್ನು ಸಮರ್ಪಿಸಿಕೊಳ್ಳುವ ಸಂಕಲ್ಪವನ್ನು ಪುಟ 9 ರಲ್ಲಿ ನೀಡಿರುವಂತೆ ಎಲ್ಲಾ ಶಿಕ್ಷಕರು ತಮ್ಮ ಶಾಲೆಯಲ್ಲಿ ಒಂದು ದಿನ, ಒಂದು ಅವಧಿಯಲ್ಲಿ ವಿವೇಕಾನಂದರ ಹೆಸರಿನಲ್ಲಿ ಸ್ವೀಕರಿಸೋಣ.**



ನಿನ್ನ ಮನಸ್ಸನ್ನು ಎಲ್ಲ ಚಿಂತನೆಗಳಿಂದ ಮುಕ್ತಗೊಳಿಸು, ಭಯಪಡಬೇಕಾದ ಅಗತ್ಯವಿಲ್ಲ.

# ಅಖಿಲ ಭಾರತೀಯ ವಿದ್ವತ್ ಗೋಷ್ಠಿ

**ಮಮತಾ ಡಿ. ಕೆ.**
**ಸಹಶಿಕ್ಷಕಿ**
**ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ,**
**ರಾಮನಗರ ಜಿಲ್ಲಾ ಮಹಿಳಾ ಪ್ರತಿನಿಧಿ**



'ಬ್ರಿಟಿಷರು ಮೆಕಾಲೆ ಶಿಕ್ಷಣ ನೀತಿಯನ್ನು ಜಾರಿಗೆ ತಂದು ಭಾರತೀಯರಿಗೆ ತಮಗೇ ಅರಿವಿಲ್ಲದಂತೆ ಗುಲಾಮಗಿರಿ ಯಲ್ಲಿಯೇ ಸಂತೋಷದ ಬದುಕಿನ ಭ್ರಮೆ ಮೂಡಿಸಿದರು. ಇಂದು ನಾವೆಲ್ಲರೂ ಸ್ವತಂತ್ರರಾಗಿ 67 ವರ್ಷ ಕಳೆದರೂ ಆ ಗುಲಾಮಗಿರಿಯ ಶಿಕ್ಷಣವನ್ನೇ ಅನುಸರಿಸುತ್ತಿರುವುದು ಶೋಚನೀಯ. ಇಂದಾದರೂ ಭಾರತೀಯ ಶಿಕ್ಷಣವನ್ನು ನೀಡಿ, ಸ್ವತಂತ್ರ, ಆತ್ಮವಿಶ್ವಾಸಿ, ರಾಷ್ಟ್ರಾಭಿಮಾನಿ ಭಾರತೀಯರನ್ನು ಸೃಷ್ಟಿಸುವುದೇ ಇಂದಿನ ಶಿಕ್ಷಣದ ಗುರಿಯಾಗಬೇಕು' ಎಂದು ಪುನರುತ್ಥಾನ ವಿದ್ಯಾಪೀಠ, ಅಹಮದಾಬಾದ್, ಗುಜರಾತ್‌ನ ಸಂಯೋಜಕಿಯಾಗಿರುವ ಇಂದುಮತಿ ಕಾಟ್‌ಧರೆಯವರು 24 ರಾಜ್ಯಗಳಿಂದ ಶಿಕ್ಷಣ ಕ್ಷೇತ್ರವಲ್ಲದೇ ಅನೇಕ ಸಂಘಗಳನ್ನು ಪ್ರತಿನಿಧಿಸಿ ಭಾಗವಹಿಸಿದ 350 ವಿವಿಧ ವಿದ್ವತ್ ಜನರನ್ನುದ್ದೇಶಿಸಿ ನಾಗಪುರ, ಮಹಾರಾಷ್ಟ್ರದಲ್ಲಿ ನಡೆದ ರಾಷ್ಟ್ರೀಯ ಶಿಕ್ಷಣದ ಪರಿಕಲ್ಪನೆ ಮತ್ತು ಸ್ವರೂಪ ಎಂಬ ವಿದ್ವತ್ ಗೋಷ್ಠಿಯಲ್ಲಿ ತಿಳಿಸಿದರು.

ಗೋಷ್ಠಿಯ ಮೊದಲನೇ ಅವಧಿ ದಿನಾಂಕ 25.11.14 ರಂದು 10.00 ಘಂಟೆಗೆ ರಾಷ್ಟ್ರ, ರಾಷ್ಟ್ರೀಯತೆ ಮತ್ತು ರಾಷ್ಟ್ರೀಯ ಶಿಕ್ಷಣವೆಂಬ ಗಹನ ವಿಚಾರದ ಬಗ್ಗೆ ಮಾತನಾಡಿದ ಖ್ಯಾತ ಚಿಂತಕರಾದ ಸುರೇಶ್‌ಜಿ ಸೋನಿ, ಭಾರತೀಯ ದೃಷ್ಟಿಕೋನ ಮತ್ತು ರಾಷ್ಟ್ರೀಯತೆಯ ಸಂಸ್ಕಾರದೊಂದಿಗೆ ವ್ಯಕ್ತಿ ನಿರ್ಮಾಣದ ಕಾರ್ಯ ನಡೆಯಬೇಕಾಗಿದೆ ಎಂದು ಹೇಳಿದರು. 'ಪ್ರತಿ ದೇಶಕ್ಕೂ ಒಂದು ಜೀವಿತೋದ್ದೇಶವಿರುತ್ತದೆ. ಭಾರತದ ಜೀವಿತೋದ್ದೇಶ ವೆಂದರೆ ಅಂತಿಮ ಸತ್ಯದೆಡೆ ಸಾಗುವುದು. ಈ ಹಿನ್ನಲೆಯಲ್ಲಿ ಭಾರತೀಯ ದೃಷ್ಟಿಕೋನ ಮತ್ತು ರಾಷ್ಟ್ರ ಸಂಸ್ಕಾರದೊಂದಿಗೆ ವ್ಯಕ್ತಿ ನಿರ್ಮಾಣವಾಗುವಂತಹ ಶಿಕ್ಷಣ ಕ್ರಮವನ್ನು ರೂಪಿಸಬೇಕಿದೆ' ಎಂದು ಹೇಳಿದರು. ಈ ಅವಧಿಯ ಅಧ್ಯಕ್ಷತೆಯನ್ನು ಜಮ್ಮು ಸಂಸ್ಕೃತ ವಿಶ್ವವಿದ್ಯಾಲಯುದ ಕುಲಪತಿಗಳಾದ ಡಾ॥ ರಾಮಾನುಜನ್ ದೇವನಾಥನಂದಜೀಯವರು ವಹಿಸಿದ್ದರು.

ಗೋಷ್ಠಿಯ ಎರಡನೇ ಅವಧಿಯಲ್ಲಿ ರಾಷ್ಟ್ರೀಯ ಶಿಕ್ಷಣದ ಪ್ರತಿಷ್ಠೆಯಲ್ಲಿ ಅವರೋಧವೆಂಬ ವಿಚಾರದಲ್ಲಿ ಮೊದಲನೆಯ ದಾಗಿ ಖ್ಯಾತ ಚಿಂತಕರೂ, ಲೇಖಕರೂ ಆದ ಮುಕುಲ್‌ಜೀ ಯವರು, ವ್ಯಕ್ತಿ ಕೇಂದ್ರಿತ ಮತ್ತು ಭೌತಿಕ ಶಿಕ್ಷಣ ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ಭಾರತೀಯನಾದವರು ಮೊದಲು ಮೆಕಾಲೆ ಶಿಕ್ಷಣದಿಂದ ಹೊರಬರಬೇಕು. ಶಿಕ್ಷಣದ ಮೂಲ ಉದ್ದೇಶ ಸರ್ವಾಂಗೀಣ ವ್ಯಕ್ತಿತ್ವದ ವಿಕಾಸವಾಗುವಂತಿರಬೇಕು. ಅನ್ನಮಯ, ಪ್ರಾಣಮಯ, ವಿಜ್ಞಾನಮಯ, ಮನೋಮಯ ಮತ್ತು ಆನಂದಮಯಗಳೆಂಬ ಪಂಚಕೋಶದ ಅರಿವಾಗು ವಂತಿರಬೇಕು. ಸುಭದ್ರ ರಾಷ್ಟ್ರ ನಿರ್ಮಾಣವಾಗಬೇಕಾದರೆ ಮೊದಲು ಸುಭದ್ರ ವ್ಯಕ್ತಿಯ ನಿರ್ಮಾಣ ವಾಗುವಂತಿರಬೇಕು. ಸ್ವದೇಶದಲ್ಲಿ ವಿದ್ಯಾವಂತನಾಗಿ ವಿದೇಶಿಮೋಹಿತನಾಗಬಾರದು. ಸ್ವದೇಶ ನಿರ್ಮಾಣವೆಂದರೆ, ಸುಭದ್ರ ರಾಷ್ಟ್ರ ನಿರ್ಮಾಣ. ಇದು ಪ್ರತಿಯೊಬ್ಬ ವಿದ್ಯಾವಂತನ ಗುರಿಯಾಗಬೇಕು. ಶಿಕ್ಷಣದಿಂದ ಒಳ್ಳೆ ಚಾರಿತ್ರ್ಯವಂತರ ನಿರ್ಮಾಣವಾದರೆ ಸುಭದ್ರ ರಾಷ್ಟ್ರ ನಿರ್ಮಾಣವಾದಂತೆಯೇ ಎಂದು ತಿಳಿಸಿದರು.

ನಂತರದಲ್ಲಿ ಪ್ರೊ॥ ಕನಕ ಸಭಾಪತಿಯವರು ದೇಶದ ಅರ್ಥವ್ಯವಸ್ಥೆಯ ಬಗ್ಗೆ ಮಾತನಾಡುತ್ತಾ 'ನಮ್ಮ ಭಾರತೀಯ ಸಮಾಜ ಎಷ್ಟು ಸುಭದ್ರವಾಗಿದೆಯೆಂದರೆ ಪ್ರತಿಯೊಂದರಲ್ಲೂ ಲಾಭ ಗಳಿಸುವಷ್ಟು. ಭಾರತೀಯ ಅರ್ಥವ್ಯವಸ್ಥೆಯಲ್ಲಿ ಭಾರತೀಯ ಸ್ತ್ರೀಯ ಸ್ಥಾನ ಅದ್ವಿತೀಯ. ಮಹಿಳೆಯ ಸಣ್ಣ ಪುಟ್ಟ ಆರ್ಥಿಕ ಸಹಾಯದಿಂದಲೇ ಪುರುಷರು ದೊಡ್ಡ ದೊಡ್ಡ ಆರ್ಥಿಕ ಸಾಧನೆಯನ್ನು ಮಾಡಿರುವ ಅನೇಕ ಉದಾಹರಣೆಗಳನ್ನು ನಾವು ನೋಡಬಹುದೆಂದು' ಹೇಳಿದರು. ಭಾರತೀಯ ಆರ್ಥಿಕ ಸುಭದ್ರತೆಗೆ ಕಾರಣ ಇಲ್ಲಿನ ಕುಟುಂಬ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆ. ಆದರೆ ಪ್ರಸ್ತುತ ನಮ್ಮ ದೇಶದ ಆರ್ಥಿಕ ವ್ಯವಸ್ಥೆ ಭಾರತೀಯತೆಯನ್ನು ನಾಶಗೊಳಿಸಲು ಪೂರಕವಾಗಿದೆ. ಭಾರತ ಕೃಷಿಪ್ರಧಾನ ರಾಷ್ಟ್ರಮಾತ್ರವಲ್ಲದೇ ಉತ್ಪಾದನಾ ಕೇಂದ್ರಿತ ರಾಷ್ಟ್ರವೂ ಹೌದೆಂದು ತಿಳಿಸಿದರು. 1750ರಲ್ಲಿಯೇ ಇದು ಬ್ರಿಟಿಷರು ಕಂಡಿದ್ದ ಸತ್ಯ. ಆದರೆ ನಮ್ಮ ಶಿಕ್ಷಣದಲ್ಲಿ ಈ ವಿಚಾರವನ್ನು ಯುವಜನಾಂಗಕ್ಕೆ ತಿಳಿಸುವುದೇ ಇಲ್ಲ. ನಮ್ಮ ದೇಶದ ಕುಟುಂಬ ಪ್ರಧಾನ ವ್ಯವಸ್ಥೆ ನಮ್ಮ ಆರ್ಥಿಕ ಸ್ವಾವಲಂಬನೆಗೆ ಸಹಕಾರಿ. ಸ್ಥಳೀಯ ಮಟ್ಟದಲ್ಲಿ ಉಳಿತಾಯ ಯೋಜನೆಗಳ ಕಡೆಗೆ ಆದ್ಯತೆ ನೀಡುವುದು ಅವಶ್ಯವೆಂದು ಹೇಳಿದರು. ನಂತರ ತಮ್ಮ ವಿಚಾರವನ್ನು ಮಂಡಿಸಿದ ಡಾ॥ ಸಂಜೀವನ್ ಸಮಾಜಗತ, ವ್ಯಕ್ತಿಗತ, ಅಂತರ್ಗತ, ವ್ಯವಹಾರದಿಂದ ಬೋಧನಾಕಾರ್ಯ ನಡೆಯಬೇಕೆಂದು ತಿಳಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ, ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ಬಯಸುತ್ತದೆ. ಏಕೆಂದರೆ ಶಿಕ್ಷಣ ಕ್ಷೇತ್ರ ನಡೆಯುತ್ತಿರುವ ದಾರಿ ಯಾರಿಗೂ ತೃಪ್ತಿ ತಂದಿರುವಂತೆ

ಪುಟ 13 ಕ್ಕೆ ➤

# ವಿವೇಕಾನಂದರ ಕನಸು ನನಸಾಗುವುದು ಹೇಗೆ ?





**ಭೀಮಸೇನ ಪುರೋಹಿತ್**
**ಎಂ.ಟೆಕ್. ವಿದ್ಯಾರ್ಥಿ**
**ಬೆಂಗಳೂರು**

'ನೀವು ಭಾರತವನ್ನು ಓದಬೇಕಾದರೆ, ಸ್ವಾಮಿ ವಿವೇಕಾನಂದರನ್ನು ಓದಿ. ಅವರಲ್ಲಿ ಯಾವ ಋಣಾತ್ಮಕ ಅಂಶಗಳೇ ಇಲ್ಲ. ಇರುವದು ಕೇವಲ ಧನಾತ್ಮಕ ಅಂಶಗಳೆ" ಎಂದು ನುಡಿದವರು ನೊಬೆಲ್ ಪುರಸ್ಕೃತ ಶ್ರೀರವೀಂದ್ರನಾಥ ಟಾಗೂರರು. ವಿವೇಕಾನಂದರನ್ನ ಓದಿದ ಪ್ರತಿಯೊಬ್ಬರದೂ ಇದೇ ಅನುಭವವೇ. ರಾಷ್ಟ್ರವು ಎದುರಿಸುತ್ತಿದ್ದ ಒಂದು ಸಂದಿಗ್ಧದ ಕ್ಲಿಷ್ಟಕರ ಸನ್ನಿವೇಶದಲ್ಲಿ ಜನಿಸಿ, ಎಲ್ಲ ಭರವಸೆಗಳನ್ನೂ ಕಳೆದುಕೊಂಡಿದ್ದ ಜನರಲ್ಲಿ ಅದ್ಭುತ ಸಂಚಲನವನ್ನು ಮೂಡಿಸಿ ಭಾರತೀಯರಲ್ಲಿದ್ದ ಸುಪ್ತ ಸಿಂಹವನ್ನು ಬಡಿದೆಬ್ಬಿಸಿದವರು ಅವರು. ಪ್ರಖರ ರಾಷ್ಟ್ರೀಯವಾದಿಗಳಾಗಿದ್ದ ತಿಲಕರಿಂದ ಹಿಡಿದು, ಮಹಾತ್ಮಾ ಗಾಂಧೀಜಿಯವರೆಗೂ ಎಲ್ಲರೂ ಸ್ವಾಮೀಜಿಯವರ ಪ್ರಭಾವಕ್ಕೊಳಗಾದವರೇ.

ಜೀವಿತಾವಧಿಯು ಅಲ್ಪವಾಗಿದ್ದರೂ ವಿವೇಕಾನಂದರು ಸಹಸ್ರ ಪೀಳಿಗೆಗಳವರೆಗು ಭಾರತ ನೆನಪಿಟ್ಟುಕೊಳ್ಳಬೇಕಾದಷ್ಟು ಸಾಧನೆಯನ್ನು, ಜಾಗೃತಿಯನ್ನು ಮೂಡಿಸಿ ಹೋಗಿದ್ದಾರೆ. ಸ್ವಾತಂತ್ರ್ಯದ ನಂತರವೂ ಈ ದೇಶ ಅನೇಕ ಸಮಸ್ಯೆಗಳಿಂದ ಬೇಯುತ್ತಿದೆ ಎಂದರೆ ನಾವು ಆ ಮಹಾತ್ಮನ ವಾಕ್ಯಗಳನ್ನು ಮರೆತಿದ್ದೇವೆ ಎಂದರ್ಥ. ವಿವೇಕಾನಂದರ ಕನಸಿನ ದೇಶವನ್ನು ಮುಂದಿಟ್ಟುಕೊಂಡು ಹೊರಟಿದ್ದರೆ, ಈ ಕಾಲಕ್ಕೆ ಭಾರತವು ಜಗದ್ಗುರು ಆಗಿರುತ್ತಿತ್ತು. ಆದರೆ ಈಗಲೂ ಸಮಯವಿದೆ. ರಾಷ್ಟ್ರಪ್ರಜ್ಞೆಯ, ಹೊಸ ಶಕ್ತಿಯ ನಾಯಕರ ಆಳ್ವಿಕೆ ಇರುವಾಗ, ಮತ್ತೆ ಇತಿಹಾಸದತ್ತ ಮುಖಮಾಡಿ, ಮಹಾತ್ಮರ ಕನಸನ್ನೊಮ್ಮೆ ಪರಾಮರ್ಶಿಸಬೇಕಿದೆ.

ವಿವೇಕಾನಂದರ ದೊಡ್ಡ ಕನಸು, 'ಸಶಕ್ತ ಭಾರತ'ದ ನಿರ್ಮಾಣ. ಸಶಕ್ತತೆ ಎಲ್ಲ ಆಯಾಮಗಳಲ್ಲಿಯೂ ಇರಬೇಕೆಂಬುದು ಸ್ವಾಮೀಜಿಗಳ ಅಭಿಪ್ರಾಯವಾಗಿತ್ತು. 'ಮನೆಯಲ್ಲಿ ಕೂತು ಗೀತೆ ಓದುವುದಕ್ಕಿಂತ, ಮೈದಾನದಲ್ಲಿ ಫುಟ್ಬಾಲ್ ಆಡುವದು ಹೆಚ್ಚು ಅಗತ್ಯ' ಎಂದವರು ನುಡಿದಿದ್ದರು. ಮೇಲ್ನೋಟಕ್ಕೆ ಖಾರವೆನಿಸುವ ಮಾತಂತೆ ಇದ್ದರೂ, ಅದರ ಅಭಿಪ್ರಾಯ ಸರ್ವಸಮ್ಮತವಾಗಿದೆ. 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂದು ಋಷಿವಾಕ್ಯಗಳೇ ಹೇಳಿವೆ. ಸಾಧನೆಗೆ ಬೇಕಾದ ಶರೀರವೇ ದೃಢವಿಲ್ಲದಿದ್ದರೆ, ಯಾರು ತಾನೆ ಸಾಹಸಕ್ಕೆ ಮುಂದಾಗುತ್ತಾರೆ. ಹೀಗಾಗಿಯೇ ಯೋಗ,ವ್ಯಾಯಾಮಕ್ಕೆ ಬಹಳ ಒತ್ತು ನೀಡುತ್ತಿದ್ದರು. ಇಂದಿನ ವೇಗದ ಬದುಕಿನಲ್ಲಿ ಸಾಹಸದ ಕ್ರೀಡೆಗಳೇ ಮಂಕಾಗಿವೆ. ಸ್ವಾಮೀಜಿಗಳು ಹೇಳಿದ್ದರಲ್ಲಾ, 'ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿ ಇರುವ ಯುವಕರು ಬೇಕು' ಎಂದು, ಅಂತಹ, ಯಾವ ದುಷ್ಟಶಕ್ತಿಗಳಿಗೂ ಜಗ್ಗದೇ ಮುನ್ನುಗ್ಗುವ ತರುಣರ ತಯಾರಿ ನಡೆಯಬೇಕು.

ಮತ್ತೊಂದು ವಿವೇಕಾನಂದರು ಪುನಃಪುನಃ ಹೇಳುತ್ತಿದ್ದ ವಿಚಾರ ಯುವಕರ ಚಾರಿತ್ರ್ಯನಿರ್ಮಾಣ. ಇವತ್ತು ಈ ದೇಶದಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಅಕ್ರಮ, ಅತ್ಯಾಚಾರಗಳನ್ನು ಕೇಳಿದಾಗಲೆಲ್ಲಾ ಸ್ವಾಮೀಜಿಯವರ ಈ ಕಳಕಳಿ ಅರ್ಥವಾಗದೇ ಇರದು. ಸುಳ್ಳು ಆಧುನಿಕತೆಯ ಹುಚ್ಚಿನಲ್ಲಿ, ನಮ್ಮತನವನ್ನು

**ಪುಟ 13 ಕ್ಕೆ ➤**

ಶ್ರದ್ಧೆಯೆಂಬುದು ಕೊನೆಯ ಮಾತು. ಶ್ರದ್ಧೆಯಿದ್ದರೆ ನಿಜವಾಗಿಯೂ ಗುರಿ ತಲುಪಿದಂತೆ.

# ಭ್ರಷ್ಟಾಚಾರ– ಅತ್ಯಾಚಾರದ ಬಿಡುಗಡೆಯ ಹಾದಿ





**ಎಚ್ಚೆನ್ನಾರ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಮೂರ್‍ನಾಲ್ಕು ದಿನಗಳ ಹಿಂದಿನ ಪತ್ರಿಕೆಯೊಂದರ ಸುದ್ದಿ. ಉತ್ತರ ಪ್ರದೇಶದ ಇಂಜಿನಿಯರ್ ಒಬ್ಬ 100 ಕೋಟಿ ರೂ ಆಸ್ತಿಯ ಒಡೆಯ. ಅವನ ಹೆಂಡತಿ ಹೆಸರಿನಲ್ಲೇ ಹತ್ತಾರು ಕೋಟಿ ರೂಗಳ ಆಸ್ತಿ. ಮನೆಯನ್ನು ಲೋಕಾಯುಕ್ತ ಅಧಿಕಾರಿಗಳು ತಪಾಸಣೆ ಮಾಡಿದಾಗ ವಜ್ರ ವೈಢೂರ್ಯಗಳೇ ಹಲವು ಕೋಟಿ. ಕೆಲವು ವರ್ಷಗಳ ಹಿಂದೆ ಆಂಧ್ರದ ಮೇಲ್ಮನೆಯಲ್ಲಿ ಭ್ರಷ್ಟಾಚಾರದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ, ಶಾಸಕರೋರ್ವರು ಭ್ರಷ್ಟಾಚಾರ ನಿಗ್ರಹದಳವು 36 ಜನ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳನ್ನು ಭ್ರಷ್ಟರೆಂದು ಗುರುತಿಸಿ ತನಿಖೆಗೆ ಆದೇಶಿಸಿತ್ತು ಎಂಬ ಮಾಹಿತಿ ನೀಡಿದರು. ಇದು ಉನ್ನತ ಮಟ್ಟದ ಭ್ರಷ್ಟಾಚಾರದ ಕಥೆಯಾದರೆ ಇನ್ನು ಕೆಳಮಟ್ಟದಲ್ಲಿ ನಡೆಯುವುದು ಲೆಕ್ಕಕ್ಕೇ ಇಲ್ಲ. ರಾಜಕಾರಣಿಗಳ ಭ್ರಷ್ಟಾಚಾರ ಎಲ್ಲಕ್ಕಿಂತ ಎತ್ತರದ್ದು.

ಪ್ರತಿನಿತ್ಯ ಪತ್ರಿಕೆ ತೆಗೆಯಿರಿ. ಒಂದಾದರೂ ಅತ್ಯಾಚಾರದ ಸುದ್ದಿ ಇಲ್ಲದೆ ಪತ್ರಿಕೆ ಪ್ರಕಟವಾಗದು. ಇತ್ತೀಚೆಗೆ ದೆಹಲಿಯಲ್ಲಿ ಊಬರ್ ಟ್ಯಾಕ್ಸಿಯಲ್ಲಿ ನಡೆದದ್ದು, ಈ ಹಿಂದೆ ನಿರ್ಭಯಾಳ ಮೇಲೆ ನಡೆದದ್ದು ದೇಶದ ರಾಜಧಾನಿಯಲ್ಲಿನ ಕಥೆಯಾದರೆ ನಮ್ಮ ರಾಜ್ಯದಲ್ಲೇ ಅಸಂಖ್ಯ ಉದಾಹರಣೆ, ಹಸುಳೆಗಳನ್ನೂ ಬಿಡದ ಕಾಮುಕರ ವಿಕೃತಿ, ಶಿಕ್ಷಕರೇ ಭಕ್ಷಕರಾದ ಕಥೆ ಅಸಹ್ಯ ಹುಟ್ಟಿಸುತ್ತದೆ.

ಭ್ರಷ್ಟಾಚಾರ–ಅತ್ಯಾಚಾರಗಳಿಂದ ಬಿಡುಗಡೆಯ ಮಾರ್ಗವೇ ಇಲ್ಲವೇ?

ಖಂಡಿತ ಇದೆ. ಇದರ ಬಗ್ಗೆ ಸಮಾಜದ ಎಲ್ಲಾ ಸ್ತರಗಳಲ್ಲೂ ವ್ಯಾಪಕ ಚರ್ಚೆ, ಚಿಂತನೆ ನಡೆಯಬೇಕು. ದಾರಿ ಹುಡುಕುವ ಪ್ರಯತ್ನ ನಡೆಯಬೇಕು.

**ನನ್ನ ತಿಳಿವಿಗೆ ಬಂದ ಎರಡು ಮಾರ್ಗ ಹೀಗಿದೆ.**

**ಮಾರ್ಗ 1 :** ಈ ಬಗೆಯ ಅಪರಾಧಗಳನ್ನು ನ್ಯಾಯಾಲಯಗಳು ತ್ವರಿತ ವಿಚಾರಣೆ ನಡೆಸಿ ಕಠಿಣವಾಗಿ ಶಿಕ್ಷಿಸಬೇಕು. ಇಂದು 4–6 ವರ್ಷ ಜೈಲಿನಲ್ಲಿ ಕಳೆಯುವುದೆಂದರೆ ಯಾರಿಗೂ ಭಯವಿಲ್ಲ. ಸಾವಿನ ಭಯವೇ ನಿಜವಾದ ಭಯ. ಅದಕ್ಕಾಗಿ ಮಾನವ ಹಕ್ಕು, ನಾಗರೀಕತೆ ಇತ್ಯಾದಿ ವಾದಗಳನ್ನು ಬದಿಗಿಟ್ಟು ಅಂಥ ಪಾಪಿಗಳನ್ನು ನೇಣಿಗೇರಿಸಬೇಕು. ಅನಕ್ಷರಸ್ಥನಾದರೆ ಅವನಿಗೆ ಕನಿಷ್ಠ 10 ವರ್ಷ ಜೈಲು ಶಿಕ್ಷೆ.

**ಮಾರ್ಗ 2 :** ಬಾಹ್ಯ ಭಯಕ್ಕಿಂತ ಆಂತರಿಕ ಭಯವೇ ಅಪರಾಧಗಳನ್ನು ತಡೆಯುವಲ್ಲಿ ಹೆಚ್ಚು ಪರಿಣಾಮಕಾರಿ. ಇದನ್ನು ಪಾಪ ಪ್ರಜ್ಞೆ ಎಂದೂ ಕರೆಯುತ್ತಾರೆ. ನಮ್ಮ ಸಂಸ್ಕೃತಿಯಲ್ಲಿ ಸ್ವರ್ಗ–ನರಕಗಳ ಕಲ್ಪನೆ ಬಂದದ್ದು ಇದೇ ಕಾರಣದಿಂದ. ಮನುಷ್ಯನ ಆತ್ಮ ಸಾಕ್ಷಿ ಅವನನ್ನು ಉತ್ತಮ ವ್ಯಕ್ತಿಯಾಗುವತ್ತ ದಾರಿ ತೋರಬೇಕು. ನಮ್ಮ ಶಿಕ್ಷಣವು ಇಂಥ ವ್ಯಕ್ತಿತ್ವವನ್ನು ರೂಪಿಸುವಂತೆ ಬದಲಾಗಬೇಕು.

**ಒಂದೆರಡು ಉದಾಹರಣೆ**

ವಾಲಿಲಾಲ ಗೋಪಾಲ ಕೃಷ್ಣಯ್ಯ ಓರ್ವ ಸ್ವಾತಂತ್ರ್ಯ ಯೋಧ ಮತ್ತು ಆಂಧ್ರ ಪ್ರದೇಶದ ಶಾಸಕರಾಗಿದ್ದವರು. ಆಜನ್ಮ ಬ್ರಹ್ಮಚಾರಿಯಾಗಿದ್ದು ದೇಶಸೇವೆಯ ಕಂಕಣ ತೊಟ್ಟವರು. ಒಮ್ಮೆ ಅವರನ್ನು 'ನೀವು ಈ ಬಗೆಯ ಜೀವನ ನಡೆಸಲು ಪ್ರೇರಣೆ ಹೇಗೆ ಸಿಕ್ಕಿತು?' ಎಂದು ಪ್ರಶ್ನಿಸಿದಾಗ ಅವರು ತಕ್ಷಣ ಹೇಳಿದ್ದು ತಮ್ಮ ಪ್ರೈಮರಿ ಶಾಲೆಯ ಅಧ್ಯಾಪಕರಾದ ಶ್ರೀ ಅದ್ದಂಕಿ ಆದಿನಾರಾಯಣ ಶರ್ಮ ಅವರ ಹೆಸರನ್ನು.

ಶರ್ಮರು ಪಾಠ ಮಾಡುವುದಷ್ಟನ್ನೇ ಅಲ್ಲದೆ, ಅಂದು ಬ್ರಿಟಿಷರು ಭಾರತೀಯರ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆ, ದೌರ್ಜನ್ಯಗಳು, ಇದನ್ನು ಪ್ರತಿರೋಧಿಸುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಿದ್ದರು. ಅವರು ಅಂದು ಬಿತ್ತಿದ್ದ ದೇಶಪ್ರೇಮ, ಸಮಾಜ ಸೇವೆಯ ಬೀಜ ಚಿಗುರಿ ನಾವು ಬೆಳೆದಂತೆಲ್ಲಾ ಬೆಳೆದು ನಮ್ಮ ಜೀವನವನ್ನು ರೂಪಿಸಿತು. ಇಷ್ಟೇ ಅಲ್ಲ ಶ್ರೀ ಶರ್ಮರು ಬದುಕಿದ ರೀತಿಯೂ ನಮಗೆ ಮಾರ್ಗದರ್ಶಕವಾಯಿತು.

ಪುಟ 12 ಕ್ಕೆ ➢

# ಪದವಿಯೋ ಜೀವನ ಕಲೆಯೋ ?

ಅನುಭವ



**ಶ್ರೀಮತಿ ಮಾಲಿನಿ ಎಸ್.**
**ಮುಖ್ಯಶಿಕ್ಷಕರು**
**ಬಿ.ಬಿ.ಎಂ.ಪಿ ಪ್ರೌಢ ಶಾಲೆ,**
**ಗವೀಪುರಂ, ಗುಟ್ಟಹಳ್ಳಿ**

ನಾವು ಒಂದೇ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳೆಲ್ಲಾ ಸೇರಿ ಹಳೇ ವಿದ್ಯಾರ್ಥಿಸಂಘವನ್ನು ಪ್ರಾರಂಭಿಸಿದ್ದೆವು. ಆ ಸಂಘದ ಕಾರ್ಯಕ್ರಮಕ್ಕೆ ಆಹ್ವಾನಿಸಲು ಇಬ್ಬರು ಸ್ನೇಹಿತೆಯರ ಮನೆಗೆ ಭೇಟಿ ನೀಡಿದಾಗ ಆದ ಅನುಭವ ಹೀಗಿದೆ.

ಸುಶೀಲಾ ಮತ್ತು ಪ್ರಫುಲ್ಲ ಒಂದೇ ತರಗತಿಯಲ್ಲಿ ಓದಿದ ನನ್ನ ಸ್ನೇಹಿತೆಯರು. ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿರುವ ಸುಶೀಲೆಯ ಮನೆಗೆ ಭೇಟಿ ನೀಡಿದಾಗ ಬಾಗಿಲು ತೆರೆದು ಸ್ವಾಗತಿಸಿದಳು. ಸುಶೀಲೆಯ ಮಗಳು ನಗು ಮೊಗದ ಮುದ್ದು ಚೆಲುವೆ. ಆದರದಿಂದ ಬರಮಾಡಿಕೊಂಡಳು. ಆಗತಾನೇ ಪೂಜೆ ಮುಗಿಸಿದ ಕಾರಣ ಮನೆಯ ತುಂಬೆಲ್ಲಾ ಅಗರ ಬತ್ತಿಯ ಸುವಾಸನೆ, ಮಂದ ಧ್ವನಿಯಲ್ಲಿ ಭಗವನ್ನಾಮಾವಳಿ, ಇಡೀ ವಾತಾವರಣ ಪ್ರಶಾಂತ. ಮನಕ್ಕೆ ಮುದನೀಡುವ ಆನಂದಮಯ ಬೆಳಗು.

ಸ್ವಲ್ಪ ಸಮಯದಲ್ಲೇ ಬಂದ ಸುಶೀಲೆ ನನ್ನನ್ನು ಆತ್ಮೀಯವಾಗಿ ಮಾತನಾಡಿಸಿ ಮನೆಯವರೆಲ್ಲರ ಪರಿಚಯ ಮಾಡಿಸಿದಳು. ಮನೆಯ ಎಲ್ಲಾ ಸದಸ್ಯರಲ್ಲೂ ಅದೇ ಸುಸಂಸ್ಕೃತ ನಡವಳಿಕೆ, ಪ್ರೀತಿ ಪೂರ್ವಕ ಭಾವ. ಅವರವರ ಕರ್ತವ್ಯದಲ್ಲಿ ನಿರತರಾಗಲು ಎಲ್ಲರೂ ವಿನಯಪೂರ್ವಕವಾಗಿ ಬೀಳ್ಕೊಂಡರು. ಭಾರತೀಯ ಸಂಸ್ಕೃತಿಯ ತಳಹದಿಯಲ್ಲೇ ನಿಂತಂತೆ ಇತ್ತು ಆ ಮನೆಯ ವಾತಾವರಣ. ಸುಶೀಲೆಯ ಆದರ ಉಪಚಾರವನ್ನು ಸ್ವೀಕರಿಸಿ ಅವಳಿಂದ ಬೀಳ್ಕೊಂಡ ನನಗೆ ಆ ಮನೆಯ ವಾತಾವರಣ, ಮಕ್ಕಳ ನಡವಳಿಕೆ, ಹಿರಿಯರ ಬಗ್ಗೆ ಇರುವ ಗೌರವ ಎಲ್ಲವೂ ಮೂಕ ವಿಸ್ಮಿತಳನ್ನಾಗಿಸಿತು. ಎಸ್.ಎಸ್.ಎಲ್.ಸಿ ಪಾಸಾದ ನಂತರ ಯೋಗ್ಯ ವರ ಸಿಕ್ಕಿದನೆಂದು ಮದುವೆ ಮಾಡಿಕೊಂಡ ಸುಶೀಲೆಯಿಂದ ಇಷ್ಟು ಸುಂದರವಾದ ಮನೆ ನಿರ್ಮಾಣ ಮಾಡಬಹುದಾದರೆ ಪದವೀಧರಳಾದ ಪ್ರಫುಲ್ಲಳ ಮನೆಯ ವಾತಾವರಣ ಹೇಗಿರಬಹುದೆಂಬ ಕನಸು ಕಾಣುತ್ತಾ ಪ್ರಫುಲ್ಲಳ ಮನೆಯತ್ತ ಹೆಜ್ಜೆ ಹಾಕಿದೆ.

ಪ್ರಫುಲ್ಲ ಅತಿ ನಾಗರೀಕ ವಾತಾವರಣದಲ್ಲಿ ಬೆಳೆದ ಹೆಣ್ಣು. ಓದಿನಲ್ಲಿ, ಆಟದಲ್ಲಿ ಎಲ್ಲದರಲ್ಲೂ ಮುಂದೆ ಇರಲೇಬೇಕೆಂಬ ಹಠದ ಹುಡುಗಿ. ಜಯನಗರದಲ್ಲಿರುವ ಅವರ ಮನೆಯ ಕರೆ ಘಂಟೆ ಅದುಮಿದಾಗ ಮನೆಯೊಳಗೆ ಜೋರಾದ ರಾಕ್ ಸಂಗೀತ. ಬೆಲ್‌ನ ಸದ್ದು ಕೇಳಿಸದೆ ಮೈಮರೆತಿದ್ದ ಮಗ. ಯಾರೋ ಬೆಲ್ ಮಾಡುತ್ತಿದ್ದಾರೆ ಬಾಗಿಲು ತೆಗೆದು ನೋಡಿ ಎಂದು ಕಿರುಚಿಕೊಳ್ಳುವ ಪ್ರಫುಲ್ಲಾ ಧ್ವನಿ; ಯಾರೂ ಪ್ರತಿಕ್ರಿಯಸದ ಕಾರಣ ತಾನೇ ಬಂದು ಬಾಗಿಲು ತೆಗೆದು ಕೃತಕ ನಗೆ ಬೀರಿ ಆಹ್ವಾನಿಸಿದಳು. ಮನೆಗೆ ಕಾಲಿಟ್ಟೊಡನೆ ಎದ್ದು ಕಾಣುತ್ತಿತ್ತು ಅವ್ಯವಸ್ಥೆಯ ವಾತಾವರಣ. ಸೋಫಾದ ಮೇಲೆ ಬಿದ್ದಿದ್ದ ಬಟ್ಟೆಗಳನ್ನು ಪಕ್ಕಕ್ಕೆ ಸರಿಸಿ ಕುಳಿತುಕೋ ಎಂದಳು. ಮನೆ ಕೆಲಸದವಳು ಬಂದಿಲ್ಲ ಅದಕ್ಕೆ ಹೀಗಿದೆ ಏನೂ ತಿಳಿದುಕೊಳ್ಳಬೇಡ ಎಂಬ ಒಗ್ಗರಣೆ ಬೇರೆ. ಮೇಲಿನ ರೂಂನಿಂದ ಮಗ ಮಮ್ಮಿ ... ಕಾಫಿ .... ಎಂದು ಕೂಗಿದಾಗ ಬಂದೇ ತಾಳು ಎಂಬ ಪ್ರತ್ಯುತ್ತರ. ಅವಳ ಮಾತು ಇನ್ನೂ ಕೊನೆಗೊಂಡಿಲ್ಲ. ಆಗಲೇ ಮಗಳು ನನಗೆ ಏನೂ ಬೇಡ ಹೋಟಲ್‌ನಲ್ಲಿ ತಿಂತೀನಿ. ನಿನ್ನ ಬ್ರೇಕ್‌ಫಾಸ್ಟ್ ಚೆನ್ನಾಗಿರೋಲ್ಲ ನನಗೆ ಸ್ಪೈಸಿ ಆಗಿರಬೇಕು ಎನ್ನುತ ನನ್ನ ಕಡೆ ಕುಡಿನೋಟ ಹರಿಸಿ ಹೊರನಡೆದಳು. ಮಗನಿಗೆ ಕಾಫಿ ಕೊಟ್ಟು ಜೋಲು ಮೋರೆಹಾಕಿ ಬಂದು ಪ್ರಫುಲ್ಲ ನೋಡೆ ನಮ್ಮ ಮನೆ ಪರಿಸ್ಥಿತಿ. ಸಾಕಾಗಿ ಹೋಗಿದೆ. ಕಾಲೇಜ್‌ನಲ್ಲಿ ಎಷ್ಟು ಚಟುವಟಿಕೆಯಿಂದ ಇದ್ದೆ. ಈಗ ನಾನು ಓದಿದ್ದೆಲ್ಲ ವೇಸ್ಟ್ ಅನ್ನಿಸುತ್ತಿದೆ. ಈ ಮನೆ ಚಾಕರಿಗೆ ಡಬಲ್ ಡಿಗ್ರಿ ಬೇಕಿತ್ತಾ? ಎಂದು ಗೋಳಾಡಿ ಕುಡಿಯೋಕೆ ಏನು ಕೊಡಲಿ... ಕಾಫಿ, ಟೀ, ಹಾಲು, ಜ್ಯೂಸ್... ಎಂದಾಗ ಏನೂ ಬೇಡಮ್ಮ ಎಲ್ಲಾ ಆಯ್ತು ಮುಂದಿನ ಭಾನುವಾರ ನಮ್ಮ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ಒಂದು ವಿಚಾರ ಸಂಕೀರ್ಣವನ್ನು ಏರ್ಪಡಿಸಿದ್ದೇವೆ. ವಿಷಯ 'ಪದವಿಗಿಂತ ಜೀವನಕಲೆ ಮುಖ್ಯ' ಎಂದು. ನೀನು ಖಂಡಿತ ಇದರಲ್ಲಿ ಭಾಗವಹಿಸಬೇಕು ಎಂದು ಆಹ್ವಾನಿಸಿ ಮನೆಗೆ ಬಂದ ನನಗೆ ಸುಶೀಲೆ ಮನೆ ವಾತಾವರಣ ಹಾಗೂ ಪ್ರಫುಲ್ಲರ ಮನೆ ವಾತಾವರಣ ಸಾರಿ ಸಾರಿ ತಿಳಿಸಿತು 'ಪದವಿಗಿಂತ ಜೀವನಕಲೆಯೇ ಮುಖ್ಯ' ಎಂದು. ನೀವೇನನ್ನುತ್ತೀರಿ? •

# ಹುಲಿ ಸತ್ತರೆ ಮನುಷ್ಯ ಸಾಯುತ್ತಾನೆಯೇ ?

ಜೀವನ ಮತ್ತು ಮೌಲ್ಯ ನಾಣ್ಯದ ಎರಡು ಮುಖವಿದ್ದಂತೆ. ಮೌಲ್ಯವಿಲ್ಲದ ಜೀವನಕ್ಕೆ ಬೆಲೆಯೇ ಇಲ್ಲ. ಹಾಗಾಗಿ ವ್ಯಕ್ತಿಗೆ ವಿದ್ಯಾರ್ಥಿ ದೆಸೆಯಿಂದಲೇ ಮೌಲ್ಯದ ಬಗ್ಗೆ ತಿಳುವಳಿಕೆ ನೀಡುವುದು ಅತ್ಯಗತ್ಯ. ಈ ಕೆಲಸವನ್ನು ಸಮಾಜದಲ್ಲಿ ಯಾರು ಮಾಡಬೇಕು? ಶಿಕ್ಷಕರೇ ಎಂದು ಕೂಡಲೇ ಯಾರಾದರೂ ಹೇಳುತ್ತಾರೆ. ಈ ಕೆಲಸವನ್ನು ಶಾಲೆಗಳಲ್ಲಿ ಸಂಸ್ಕೃತ, ಕನ್ನಡ, ಹಿಂದಿ ಶಿಕ್ಷಕರ ಹೊಣೆ ಎಂದು ಸಾಮಾನ್ಯವಾಗಿ ಎಲ್ಲರೂ ಭಾವಿಸುತ್ತಾರೆ. ಗಣಿತ, ವಿಜ್ಞಾನವೇ ಮೊದಲಾದ ವಿಷಯಗಳಿಗೂ ಮೌಲ್ಯ ಪಾಠಗಳಿಗೂ ಸಂಬಂಧವಿಲ್ಲ ಎಂದು ಆಯಾ ಶಿಕ್ಷಕರೂ ಸೇರಿ ಯೋಚಿಸುತ್ತಾರೆ. ಆದರೆ ಗಣಿತ ಮತ್ತು ವಿಜ್ಞಾನದಂತಹ ವಿಷಯಗಳ ಬೋಧನೆಯಲ್ಲಿಯೂ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯ ಎಂಬುದನ್ನು ಶಿಕ್ಷಣ ತಜ್ಞರಾದ ಡಾ॥ ಹೆಚ್.ಎಸ್. ಗಣೇಶ್ ಭಟ್‌ರವರು ನಿದರ್ಶನಗಳ ಮೂಲಕ ಶಿಕ್ಷಕರಿಗೆ ಮನದಟ್ಟು ಮಾಡಿದರು.

ದಿನಾಂಕ 13–12–2014 ರಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಿಳಾ ವಿಭಾಗವು ಒಟ್ಟಾಗಿ ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗೆ ನಡೆಸಿದ ಕಾರ್ಯಾಗಾರದಲ್ಲಿ ಡಾ॥ ಗಣೇಶ್ ಭಟ್ಟರು ಗಣಿತದಲ್ಲಿ ಮೌಲ್ಯ ಇರುವಂತೆ ಎಲ್ಲಾ ಮಾನವರಲ್ಲಿ ಮೌಲ್ಯ ಇರುತ್ತದೆ. ಪುಸ್ತಕ ಜ್ಞಾನಕ್ಕಿಂತ ಮಸ್ತಕ ಜ್ಞಾನ (ಅನುಭವ) ಜೀವನವನ್ನು ರೂಪಿಸುತ್ತದೆ ಎಂದು ತಿಳಿಸಿದರು. ಗಣಿತದ ಪೈಥಾಗರಸ್ ಥೀರಮ್, ಸೆಟ್ ಥಿಯರಿಗಳನ್ನು ಮಕ್ಕಳಿಗೆ ಸುಲಭವಾಗಿ ಬೋಧಿಸುವುದರ ಜೊತೆಗೆ ಜೀವನ ಮೌಲ್ಯವನ್ನು ಹೇಗೆ ಅಳವಡಿಸಿಕೊಳ್ಳಬೇಕೆಂಬುದನ್ನು ಮನೋಜ್ಞವಾಗಿ ನಿರೂಪಿಸಿದರು. ವಿಜ್ಞಾನದ ಧ್ವನಿ ಪಾಠ ಮಾಡುವಾಗ ಸಂಗೀತದ ಧ್ವನಿಗಳ ಜೊತೆಗೆ ಸಮೀಕರಿಸಿ ಬೋಧಿಸಬಹುದೆಂಬುದಕ್ಕೆ ಅನೇಕ ಉದಾಹರಣೆಗಳನ್ನು ನೀಡಿದರು. ವೇದಗಳ ಮೌಲ್ಯಕ್ಕೆ ಈ ಬೋಧನೆಯನ್ನು ಸಮೀಕರಿಸಿದರು. ಹುಲಿ ಸತ್ತರೆ ಮನುಷ್ಯ ಸಾಯುತ್ತಾನೆ. ಹೇಗೆ? ಕಾಡು ನಾಶವಾಗುತ್ತದೆ ಆಗ ನೀರು ಇರುವುದಿಲ್ಲ ಪರಿಣಾಮ ಹುಲಿ ಸಾಯುತ್ತದೆ. ಕಾಡಿಲ್ಲದೆ ಮನುಷ್ಯನೂ ಇರಲಾಗುವುದಿಲ್ಲ. ಆದ್ದರಿಂದ ಅರಣ್ಯ ಸಂರಕ್ಷಣೆ ಅಗತ್ಯ ಎಂಬುದನ್ನು ಅರಣ್ಯ ಸಂರಕ್ಷಣೆ ಪಾಠ ಬೋಧಿಸುವಾಗ ವಿದ್ಯಾರ್ಥಿಗಳಿಗೆ ಹೇಳಬಹುದು ಎಂದು ಪ್ರತಿಪಾದಿಸಿದರು. ಮಂಕುತಿಮ್ಮನ ಕಗ್ಗದಲ್ಲಿ ಇರುವ ಮೌಲ್ಯಗಳನ್ನು ವಿಜ್ಞಾನ ಬೋಧಿಸುವಾಗ ಹೇಗೆ ಅಳವಡಿಸಿಕೊಳ್ಳಬಹುದೆಂಬುದನ್ನು ಸ್ಫೂರ್ತಿದಾಯಕವಾಗಿ ಶಿಕ್ಷಕರಿಗೆ ಮನವರಿಕೆ ಮಾಡಿದರು. ವಿಜ್ಞಾನಿಗಳ ಬಗ್ಗೆ ಪಾಠ ಪ್ರಾರಂಭಿಸುವಾಗ ಆ ವಿಜ್ಞಾನಿಯ ವೈಯುಕ್ತಿಕ ವಿಷಯದ ಬಗ್ಗೆ ಒಂದೆರಡು ಅಂಶ ತಿಳಿಸಿದರೆ ವಿದ್ಯಾರ್ಥಿಗಳಿಗೆ ಆಸಕ್ತಿಯೂ ಹುಟ್ಟುತ್ತದೆ, ಮೌಲ್ಯವೂ ಗಮನಿಸಿದಂತಾಗುತ್ತದೆ ಎಂದು ತಿಳಿಸಿದರು. ವಿಜ್ಞಾನದ ಬೆಳಕು ಪಾಠ ಮಾಡುವಾಗ ಕರ್ಣ ಕುಂತಿಗೆ ಕೊಟ್ಟ ವಚನ 'ತೊಟ್ಟ ಬಾಣ ತೊಡುವುದಿಲ್ಲ ; ಇಟ್ಟ ಗುರಿ ಬದಲಿಸುವುದಿಲ್ಲ' ದೊಂದಿಗೆ ಸಮೀಕರಿಸಿ ಬೆಳಕು ನೇರವಾಗಿ ಚಲಿಸುತ್ತದೆ ಎಂಬುದನ್ನು ಬೋಧಿಸಬಹುದಾಗಿ ಹೇಳಿದರು. ಇದಲ್ಲದೆ ವಿವೇಕಾನಂದರು, ಅಬ್ದುಲ್ ಕಲಾಂ, ಮೇಡಂ ಕ್ಯೂರಿ ಮುಂತಾದ ಮಹಾನ್ ವ್ಯಕ್ತಿಗಳ ಸಂದೇಶಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಡಾ॥ ಗಣೇಶ ಭಟ್ಟರು ಮಾತನಾಡುತ್ತಿದ್ದರೆ ಸಭೆಯಲ್ಲಿ ಉಪಸ್ಥಿತರಿದ್ದ ಸುಮಾರು 67ಕ್ಕೂ ಹೆಚ್ಚು ಶಿಕ್ಷಕರು ತನ್ಮಯತೆಯಿಂದ ಅವರ ವಿಚಾರಗಳನ್ನು ತಮ್ಮದಾಗಿಸಿಕೊಳ್ಳುತ್ತಿದ್ದರು.

ಕಾರ್ಯಾಗಾರದ ಉದ್ಘಾಟನೆಯನ್ನು ಮಾಡಿದ ಶ್ರೀ ಕೃಷ್ಣ ಇಂಟರ್ ನ್ಯಾಷನಲ್ ಸಂಸ್ಥೆಯ ಸ್ಥಾಪಕರಾದ ಡಾ॥ ರುಕ್ಮಾಂಗದ ನಾಯ್ಡುರವರು ವಿದ್ಯೆ ಮನುಷ್ಯನ ಬದುಕಿನಲ್ಲಿ ಬಹಳ ಪ್ರಮುಖವಾದುದು. ಅದನ್ನು ಕಲಿಸುವ ಶಿಕ್ಷಕರಿಗೆ ಶ್ರದ್ಧೆ ತಾಳ್ಮೆಯ ಅಗತ್ಯವಿದೆ. ವ್ಯಕ್ತಿಯ ನಿರ್ಮಾಣ ಅಥವಾ ನಿರ್ನಾಮಕ್ಕೆ ಶಿಕ್ಷಕರು ಕಾರಣರಾಗುತ್ತಾರೆ. ಶಿಕ್ಷಕರಿಂದ ವಿದ್ಯಾರ್ಥಿ ಶಾಲೆಗೆ, ಮನೆಗೆ, ಸಮಾಜಕ್ಕೆ, ದೇಶಕ್ಕೆ ಆಸ್ತಿಯಾಗುತ್ತಾನೆ. ಆದ್ದರಿಂದ ಶಿಕ್ಷಕರು ಶ್ರದ್ಧೆ, ನಿಷ್ಠೆಯಿಂದ ಕೆಲಸಮಾಡಬೇಕು ಎಂಬುದನ್ನು ಸ್ವಾಮಿ ವಿವೇಕಾನಂದರ ಹೇಳಿಕೆಯಿಂದ ಸ್ಪಷ್ಟಪಡಿಸಿದರು.

ಮಧ್ಯಾಹ್ನದ ಅವಧಿಯಲ್ಲಿ ಯೂತ್ ಫಾರ್ ಸೇವಾದ ಶ್ರೀ ಪ್ರದೀಪ್‌ರವರು ಶಿಕ್ಷಕರನ್ನುದ್ದೇಶಿಸಿ ಮಾತನಾಡಿದರು. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಕಿರಿಯ ಸಾಫ್ಟ್‌ವೇರ್ ಇಂಜಿನಿಯರ್ ಆದ ಪ್ರದೀಪರ ಮಾತುಗಳು ಶಿಕ್ಷಕರ ಮೆಚ್ಚುಗೆಯನ್ನು ಗಳಿಸಿತು. ಅನಂತರ 'ಜರ್ನಿ ಫ್ರಮ್ ಟೀಚರ್ ಟು ಗುರು' ದೃಶ್ಯ ಶ್ರವಣ( ವಿಡಿಯೋ ಕ್ಲಿಪಿಂಗ್) ವೀಕ್ಷಿಸಿದ ಶಿಕ್ಷಕರು ಹೊಸ ಸ್ಫೂರ್ತಿಯನ್ನು ಪಡೆದುಕೊಂಡರು.

ಅಂದಿನ ಕಾರ್ಯಕ್ರಮದಲ್ಲಿ ಡಾ॥ ಗಣೇಶ್ ಭಟ್ಟರೊಂದಿಗೆ ಡಾ॥ ರುಕ್ಮಾಂಗದ ನಾಯ್ಡು ಹಾಗೂ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳಾದ ಶ್ರೀಮತಿ ಸೀತಾಲಕ್ಷ್ಮಿ, ವರಲಕ್ಷ್ಮಿ ಹಾಗೂ ಮಾಲಿನಿಯವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಮೊದಲಲ್ಲಿ ಕುಮಾರಿ ಸಂಪದ ಸುಶ್ರಾವ್ಯ ಪ್ರಾರ್ಥನೆಯನ್ನು ಹಾಡಿದರು. ಲಾರೆಲ್ ಪ್ರೌಢಶಾಲೆಯ ಶ್ರೀಮತಿ ಗಾಯತ್ರಿ ಸುಬ್ಬುಕೃಷ್ಣ ಸ್ವಾಗತಿಸಿದರು. ಶ್ರೀಮತಿ ಮಾಲಿನಿಯವರು ಪ್ರಸ್ತಾವನಾ ನುಡಿಗಳನ್ನು ಆಡಿದರು. ಸಾಯಿ ಸಂಸ್ಥೆ ಶಾಲೆಯ ಶಿಕ್ಷಕರಾದ ಶ್ರೀಮತಿ ಗಾಯತ್ರಿಯವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಾಗಾರದಲ್ಲಿ ತಾವು ಉತ್ತಮವಾದುದನ್ನು ಪಡೆದುಕೊಂಡು ಹೋಗುತ್ತಿದ್ದೇವೆ ಎಂಬ ತೃಪ್ತಿ ಶಿಕ್ಷಕರಲ್ಲಿ ಮೂಡಿಬಂತು.

**ವರದಿ – ಶ್ರೀಮತಿ ಗಾಯತ್ರಿ ಸುಬ್ಬುಕೃಷ್ಣ**

**ಪ್ರತಿಯೊಂದು ಕೆಲಸವನ್ನೂ ಅದರ ಸಣ್ಣ ಪುಟ್ಟ ವಿವರಗಳಿಗೂ ಗಮನಕೊಟ್ಟು ಮಾಡುವವನು ಶ್ರೇಷ್ಠ.**

**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)**

**ನಂ. 55, 'ಯಾದವ ಸ್ಮೃತಿ', 1 ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು–20**

# ಸಂಕಲ್ಪ

ಸರ್ವಶಕ್ತಿವಂತನಾದ ಭಗವಂತನನ್ನು ಹಾಗೂ ನಮ್ಮ ಹಿಂದಿನ ಶ್ರೇಷ್ಠ ಗುರುಪರಂಪರೆಯುನ್ನು ಸ್ಮರಿಸುತ್ತಾ ತ್ಯಾಗ, ಸೇವೆ, ಕರ್ಮಠತೆಗಳ ಸಾಕಾರಮೂರ್ತಿಯಾಗಿ ನಾಡಿನ ಜನತೆಗೆ, ಏಳಿ ಎದ್ದೇಳಿ ಗುರಿಮುಟ್ಟುವವರೆಗೂ ನಿಲ್ಲದಿರಿ ಎಂಬ ರಾಷ್ಟ್ರೀಯ ಕರ್ತವ್ಯದ ಕರೆ ನೀಡಿದ ವೀರಸನ್ಯಾಸಿ ಸ್ವಾಮಿ ವಿವೇಕಾನಂದರ ಜನ್ಮ ಜಯಂತಿಯ ಈ ಪವಿತ್ರ ಸಂದರ್ಭದಲ್ಲಿ ನಾನು ಹೀಗೆ ಸಂಕಲ್ಪ ಮಾಡುತ್ತೇನೆ.

"ಶಿಕ್ಷಕ ವೃತ್ತಿಯು ಶ್ರೇಷ್ಠವಾದ ವೃತ್ತಿ' ಯೆಂದು ಪ್ರಜ್ಞಾಪೂರ್ವಕವಾಗಿ ತಿಳಿದೇ ನಾನು ಈ ವೃತ್ತಿಯನ್ನು ಸ್ವೀಕರಿಸಿದ್ದೇನೆ. ನನ್ನ ವೃತ್ತಿಯಲ್ಲಿ ನೈಪುಣ್ಯವನ್ನು ಗಳಿಸಿಕೊಳ್ಳಲು ಸದಾ ಕಾರ್ಯತತ್ಪರನಾಗಿ, ನನ್ನ ಸ್ವಂತ ಜೀವನದ ಆದರ್ಶದ ಮೂಲಕ, ನನ್ನ ವಿದ್ಯಾರ್ಥಿಗಳಲ್ಲಿ ಸದ್ಗುಣಗಳನ್ನು ಮೂಡಿಸಿ ಅವರನ್ನು ಉತ್ತಮ ಪ್ರಜೆಗಳಾಗಿ ರೂಪಿಸುವ ನನ್ನ ಹೊಣೆಗಾರಿಕೆಯನ್ನು ನಾನು ಕಾಯಾ, ವಾಚಾ, ಮನಸಾ ನಿರ್ವಹಿಸಲು ವಚನ ಬದ್ಧನಾಗಿದ್ದೇನೆ.

# ‘ಫಲ’ ಸೇವನೆ

ಆಧಾರ : ದಿ ಹಿಂದೂ ಪತ್ರಿಕೆ
ಆಂಗ್ಲ ಮೂಲ: ಡಾ॥ ವಿ. ನಾಗರಾಜ್
ಕನ್ನಡಕ್ಕೆ
**ಶ್ರೀಮತಿ ಪರಿಮಳ ಆರ್. ದೇಸಾಯಿ**
ಮುಖ್ಯಶಿಕ್ಷಕರು, ಸ್ವಾಮಿ ವಿವೇಕಾನಂದ ವಿದ್ಯಾಶಾಲಾ





ಹಣ್ಣುಗಳ ಸೇವನೆಯು ನಮ್ಮ ಆರೋಗ್ಯಕ್ಕೆ ಒಳ್ಳೆಯದು. ಇತ್ತೀಚೆಗೆ ಹಣ್ಣುಗಳನ್ನು ಊಟಕ್ಕೆ ಮುಂಚೆ ಸೇವಿಸಿದರೆ ಹೆಚ್ಚು ಪ್ರಯೋಜನಕಾರಿ, ಊಟದ ನಂತರ ಸೇವಿಸಿದರೆ ಹಾನಿಕಾರಕ ಎನ್ನುತ್ತಾರೆ. ಹೀಗಾಗಿ ಹಣ್ಣುಗಳನ್ನು ಊಟಕ್ಕೆ ಮುಂಚೆ ಸೇವಿಸಬೇಕಾ? ಅಥವಾ ಊಟದ ನಂತರ ಸೇವಿಸಬೇಕಾ? ಎನ್ನುವ ಗೊಂದಲ ಉಂಟಾಗುತ್ತದೆ


ಊಟಕ್ಕೆ ಮುಂಚೆ ಹಣ್ಣು ತಿಂದರೆ ಅದರ ಪೂರ್ಣ ಪ್ರಯೋಜನ ದೊರೆಯುತ್ತದೆ. ಆದರೆ ಊಟದೊಂದಿಗೆ ಸೇವಿಸಿದರೆ ಹಣ್ಣುಗಳು ಹುದುಗುವಿಕೆಗೆ ಒಳಗಾಗಿ ಹಾನಿಯನ್ನುಂಟು ಮಾಡುತ್ತದೆ ಎಂಬ ವಿಚಾರವಿದೆ. ಆದರೆ ಎಲ್ಲ ವೈಜ್ಞಾನಿಕ ಸಂಶೋಧನೆಗಳು ಈ ಕಲ್ಪನೆ ತಪ್ಪು ಎಂದು ಸಾಬೀತುಪಡಿಸುತ್ತದೆ.

ಯಾವುದೇ ಆಹಾರವನ್ನು ಸೇವಿಸಿದಾಗ, ಆಹಾರದಲ್ಲಿರುವ ಪ್ರೋಟೀನುಗಳು ಅಮೈನೋ ಅಮ್ಲಗಳಾಗಿ, ಶರ್ಕರಪಿಷ್ಟ (ಕಾರ್ಬೋಹೈಡ್ರೇಟು) ಗಳು ಗುಕ್ಲೋಸ್ ಆಗಿ, ಲಿಪಿಡ್ ಗಳು (ಕೊಬ್ಬು) ಕೊಬ್ಬಿನಾಮ್ಲಗಳಾಗಿ ಪರಿವರ್ತನೆಯಾಗುತ್ತದೆ. ನಂತರ ಅದು ಸಣ್ಣ ಕರುಳಿನಿಂದ ಹೀರಲ್ಪಡುತ್ತದೆ.

ನಾವು ಆಹಾರವನ್ನು ಸೇವಿಸುವಾಗ ಜೀರ್ಣಕ್ರಿಯೆಯು ಬಾಯಿಯಲ್ಲಿಯೇ ಪ್ರಾರಂಭವಾಗುತ್ತದೆ. ಬಾಯಿಯಲ್ಲಿ ಆಹಾರ ಅಗಿಯುತ್ತಿರುವಾಗ ಅಹಾರದಲ್ಲಿರುವ ಕಾರ್ಬೋಹೈಡ್ರೇಟ್ (ಶರ್ಕರಪಿಷ್ಟ) ಅಮೈಲೇಜ್ ಎಂಬ ಕಿಣ್ವದಿಂದ ಸರಳ ಕಣಗಳಾಗಿ ಭಾಗಶಃ ಪರಿವರ್ತನೆಯಾಗುತ್ತದೆ.

ಬಾಯಿಯಲ್ಲಿ ಭಾಗಶಃ ಜೀರ್ಣವಾದ ಕಾರ್ಬೋಹೈಡ್ರೇಟ್‌ಗಳು ಪ್ರೋಟೀನ್ ಮತ್ತು ಕೊಬ್ಬು ಜಠರಕ್ಕೆ ಬರುತ್ತದೆ. ಜಠರದಲ್ಲಿರುವ ಕಿಣ್ವಗಳಾದ ಪೆಪ್ಸಿನ್ ಮತ್ತು ಡಯಾಸ್ಟೇಜ್ ಹಾಗೂ ಹೈಡ್ರೋಕ್ಲೋರಿಕ್ ಆಮ್ಲದ ಸಹಾಯದಿಂದ ಸಂಕೀರ್ಣ ಪ್ರೋಟೀನ್‌ಗಳು, ಕಾರ್ಬೋಹೈಡ್ರೇಟುಗಳು ಸರಳ ಕಣಗಳಾಗಿ ವಿಭಜಿಸಲ್ಪಡುತ್ತವೆ.

ಆಹಾರವು ಜಠರದಿಂದ ಡುಯೋಡಿನಮ್ ಗೆ ಬಂದಾಗ ಸಣ್ಣ ಕರುಳಿನಲ್ಲಿ ಆಹಾರವು ಸಂಪೂರ್ಣವಾಗಿ ಜೀರ್ಣವಾಗುತ್ತದೆ. ಸಣ್ಣ ಕರುಳಿನಲ್ಲಿ ಪಿತ್ತರಸದ ಲಿಪೇಸ್ ಕೊಬ್ಬನ್ನು ಎಮಲ್ಸೀಕರಣದ ಮೂಲಕ ಸಣ್ಣ ಕಣಗಳಾಗಿ ವಿಭಜಿಸುತ್ತದೆ. ಪ್ರೋಟೀಯೇಸ್ ಮತ್ತು ಪೆಪ್ಟೈಡುಗಳು ಪ್ರೋಟೀನ್ ಗಳನ್ನು ಅಮೈನೋಆಮ್ಲಗಳನ್ನಾಗಿ ವಿಭಜಿಸುತ್ತವೆ, ಲಿಪೇಸ್ ಕೊಬ್ಬನ್ನು ಕೊಬ್ಬಿನಾಮ್ಲ ಗಳಾಗಿ ವಿಭಜಿಸುತ್ತವೆ. ಕಾರ್ಬೈಡೇಸ್ ಕಾರ್ಬೋಹೈಡ್ರೇಟು (ಶರ್ಕರ ಪಿಷ್ಟ) ಗಳನ್ನು ಸರಳ ಸಕ್ಕರೆಯಾಗಿ ವಿಭಜಿಸುತ್ತವೆ. ಸಣ್ಣ ಕರುಳಿನಲ್ಲಿ ಆಹಾರವು ಕಿಣ್ವಗಳಿಂದ ರಕ್ತವು



ಹೀರಿಕೊಳ್ಳಬಲ್ಲ ಸೂಕ್ಷ್ಮಕಣಗಳಾಗಿ ಪರಿವರ್ತನೆಯಾಗುತ್ತದೆ. ಈ ಸರಳ ಸೂಕ್ಷ್ಮಕಣಗಳನ್ನು ಎಂದರೆ ಜೀರ್ಣವಾದ ಅಹಾರವನ್ನು ಸಣ್ಣಕರುಳು ಹೀರಿಕೊಳ್ಳುತ್ತದೆ. ಜೀರ್ಣವಾಗದ ಆಹಾರವು ದೊಡ್ಡ ಕರುಳಿಗೆ ಸಾಗಿಸಲ್ಪಡುತ್ತದೆ.

ಅನ್ನ ಅಥವಾ ಹಣ್ಣು ಅಥವಾ ಚಪಾತಿ ಅಥವಾ ಯಾವುದೇ ಆಹಾರವನ್ನು ನಾವು ಸೇವಿಸಿದಾಗ ಅದು ಜೀರ್ಣಕ್ರಿಯೆಯ ಎಲ್ಲ ಹಂತಗಳಿಗನುಗುಣವಾಯೇ ಜೀರ್ಣವಾಗಿ ದೇಹಗತ ವಾಗುತ್ತದೆ. ಹಣ್ಣುಗಳಿಂದಾಗುವ ಪ್ರಯೋಜನ ಎಂದರೆ ಹಣ್ಣುಗಳಲ್ಲಿರುವ ಲೈಕೊಪೆನ್‌ಗಳು, ಸುವಾಸನೆಯುಕ್ತ ಸಂಯುಕ್ತಗಳು, ಪಾಲಿಫಿನಾಲ್‌ಗಳು, ವಿಶೇಷವಾಗಿ ಬೆರ್ರಿ ಹಣ್ಣುಗಳು ಹಾಗೂ ಬಣ್ಣದ ಹಣ್ಣುಗಳ ಮೇಲೆ ಕಿಣ್ವಗಳು ವರ್ತಿಸುವುದಿಲ್ಲ. ಇವು ನೇರವಾಗಿ ಸಣ್ಣ ಕರುಳಿನಿಂದ ಹೀರಲ್ಪಡುತ್ತವೆ

ಹಣ್ಣುಗಳು ಆ್ಯಂಟಿ ಆಕ್ಸಿಡೆಂಟ್ (ಉತ್ಕರ್ಷಣ ನಿರೋಧಕ) ಗಳನ್ನು ಹೊಂದಿದ್ದು ಅವು ಜೀವಕೋಶಗಳ ಸ್ವಾಭಾವಿಕ ಸಾವು, ಮೈಟೊಕ್ರೋಂಡ್ರಿಯಾದ ನಾಶವನ್ನು ತಡೆಗಟ್ಟುತ್ತವೆ. ವಯಸ್ಸಾಗುವುದನ್ನು ನಿಧಾನಗೊಳಿಸುತ್ತವೆ. ಆದ್ದರಿಂದ ಹಣ್ಣುಗಳನ್ನು ಊಟಕ್ಕೆ ಮುಂಚೆ, ಊಟದ ಜೊತೆಯಲ್ಲಿ ಅಥವಾ ಊಟದ ನಂತರ, ಯಾವಾಗ ಬೇಕಾದರೂ ಸೇವಿಸಬಹುದು. ಆದರಿಂದ ಪೂರ್ಣ ಲಾಭ ದೊರೆಯುತ್ತದೆ.

ಆದರೆ ಕೊಳೆತ ಹಣ್ಣುಗಳನ್ನು ಮಾತ್ರ ಸೇವಿಸಬಾರದು ಅದರಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾಗಳಿರುತ್ತವೆ. ಹೆಚ್ಚು ಸಕ್ಕರೆ ಅಂಶವನ್ನು ಬಿಡುಗಡೆಮಾಡುವ ದ್ರಾಕ್ಷಿ ಹಣ್ಣುಗಳನ್ನು ಸಕ್ಕರೆ ರೋಗಿಗಳು ಸೇವಿಸದೆ ಇರುವುದು ಉತ್ತಮ.

ಆರೋಗ್ಯವಂತ ಜೀವನಕ್ಕಾಗಿ ಬಣ್ಣದ ಹಣ್ಣುಗಳನ್ನು ಹಾಗೂ ಬಣ್ಣದ ತರಕಾರಿಗಳನ್ನು ಸೇವಿಸಿರಿ.

**“EAT RAINBOW ”** ●

**ತಾಯಿಯ ಸೇವೆಯೇ ನೀನು ಮಾಡುವ ಅತಿ ದೊಡ್ಡ ಸೇವೆಯೆಂದು ತಿಳಿದುಕೋ.**

# ದಿನಾಂಕ: 26–11–1940 ರಂದು ಸುಭಾಷ್‌ಚಂದ್ರ ಬೋಸ್‌ರು ಬಂಗಾಳದ ಗವರ್ನರ್‌ಗೆ ಬರೆದ ಪತ್ರ



ಯಾವುದೇ ತ್ಯಾಗವೂ ಎಂದಿಗೂ ವ್ಯರ್ಥವಾಗದು. ಯಾವುದೇ ಉನ್ನತ ಧ್ಯೇಯ ಕೈಗೂಡುವುದು ನೋವು ತ್ಯಾಗಗಳ ಮೂಲಕವೇ. ಇದು ಸಾರ್ವಕಾಲಿಕ ಸಾರ್ವದೇಶಿಕ ಸತ್ಯ.

'ಈ ನಶ್ವರ ಜಗತ್ತಿನಲ್ಲಿ ಎಲ್ಲವೂ ನಶಿಸುತ್ತವೆ. ನಶಿಸದೆ ಉಳಿಯುವುದು ಭಾವನೆ ಗಳು, ಧ್ಯೇಯಗಳು, ಕನಸುಗಳು. ಒಂದು ಭಾವನೆಯ ಸಾಕ್ಷಾತ್ಕಾರಕ್ಕಾಗಿ ಒಬ್ಬ ವ್ಯಕ್ತಿ ಸಾಯಬಹುದು. ಆದರೆ ಅನಂತರ ಆ ಭಾವನೆಯ ಅಸಂಖ್ಯ ಪುನರವತಾರಗಳಾಗುತ್ತವೆ. ವಿಕಾಸಚಕ್ರ ಚಲಿಸುವುದೇ ಹೀಗೆ. ಒಂದು ಪೀಳಿಗೆಯ ಭಾವನೆ–ಗುರಿ–ಕನಸುಗಳು ಮುಂದಿನ ಪೀಳಿಗೆಗೆ ವಾರಸಿಕೆಯಾಗುತ್ತವೆ.

ಒಂದು ಉದಾತ್ತ ತತ್ವಕ್ಕಾಗಿ ಬದುಕಿ ಸತ್ತೆನೆಂಬುದಕ್ಕಿಂತ ಹೆಚ್ಚಿನ ಸಮಾಧಾನ ಒಬ್ಬ ವ್ಯಕ್ತಿಗೆ ಬೇರೆ ಏನಿದ್ದೀತು? ನಾನು ಮುಗಿಸಲಾಗದ ಪ್ರಕ್ರಿಯೆಯನ್ನು ನಾಳಿನವರು ಮುಂದುವರಿಸುತ್ತಾರೆ ಎಂಬ ಭರವಸೆಗಿಂತ ಹೆಚ್ಚಿನ ಪ್ರತಿಫಲ ಏನಿದ್ದೀತು.

ಈ ಬಾಳಿನ ನಷ್ಟಗಳನ್ನು ಲೋಕಾಂತರದ ಅಮೃತತ್ವವು ನೂರು ಪಟ್ಟು ತುಂಬಿ ಕೊಡುತ್ತದೆ. ಇದು ಆತ್ಮದ ಪಯಣ ವಿಧಾನ. ದೇಶ ಬದುಕಲೆಂದು ವ್ಯಕ್ತಿ ಸಾಯಬೇಕಾಗುತ್ತದೆ. ಭಾರತ ಬದುಕಿ ಸ್ವಾತಂತ್ರ್ಯವನ್ನೂ ಭವ್ಯತೆಯನ್ನೂ ಗಳಿಸಲೆಂದು ಇಂದು ನಾನು ಸಾಯಲು ಸಿದ್ಧನಿರುವೆ.

ನನ್ನ ದೇಶಬಾಂಧವರಿಗೆ ನಾನು ಹೇಳುವುದಿದು: ಜಗತ್ತಿನಲ್ಲಿ ಗುಲಾಮಗಿರಿಗಿಂತ ಹೆಚ್ಚಿನ ಶಾಪ ಇಲ್ಲ ಎಂಬುದನ್ನು ಮರೆಯದಿರಿ. ಅನ್ಯಾಯದೊಡನೆ ರಾಜಿ ಮಾಡಿಕ್ಕೊಳ್ಳುವುದಕ್ಕಿಂತ ಹೆಚ್ಚಿನ ಅಪರಾಧ ಬೇರೆ ಇಲ್ಲವೆಂಬುದನ್ನು ಮರೆಯದಿರಿ. ಚಿರಂತನ ನಿಯಮವನ್ನು ನೆನಪಿನಲ್ಲಿಡಿ: ಜೀವನವನ್ನು ಪಡೆಯಲು ಜೀವನವನ್ನು ಕೊಡಬೇಕು. ಎಷ್ಟೇ ಕ್ಲೇಶಕರವಾದರೂ ಅನ್ಯಾಯದ ವಿರುದ್ಧ ಸೆಣಸುವುದಕ್ಕಿಂತ ಹೆಚ್ಚು ಉದಾತ್ತವಾದ ಗುಣ ಇನ್ನೊಂದಿಲ್ಲ. •

# ಶಿಕ್ಷಕರ ಸಂಕಲ್ಪ ದಿನಕ್ಕೆ ಪ್ರೇರಣೆ



## ಗುರುವಿನ ವ್ಯಕ್ತಿತ್ವ

ಗುರುವಿನ ಬಗ್ಗೆ ನಾವು ಮೊಟ್ಟಮೊದಲಿಗೆ ಗಮನಿಸಬೇಕಾದ ಸಂಗತಿ ಎಂದರೆ, ಅವನ ಸ್ವಂತ ವ್ಯಕ್ತಿತ್ವ. ಅನಂತರ ಅವನು ಆಡುವ ಮಾತುಗಳು. ಏಕೆಂದರೆ, ಗುರುವು ಒಂದು ಶಕ್ತಿಕ್ಷೇಪಕವಿದ್ದಂತೆ. ಅವನಲ್ಲೇ ಅಧ್ಯಾತ್ಮಶಕ್ತಿ ಇಲ್ಲವಾದಲ್ಲಿ ಅವನು ಆ ಶಕ್ತಿಯ ಅಲೆ ಕಳುಹುವುದಾದರೂ ಹೇಗೆ? ಉದಾಹರಣೆಗೆ, 'ಹೀಟರ್' ಕಾದಿದ್ದಲ್ಲಿ ಮಾತ್ರ ಉಷ್ಣತೆಯ ಅಲೆಗಳನ್ನು ಅದು ಕಳುಹಿಸಬಲ್ಲುದು, ಅನ್ಯಥಾ ಸಾಧ್ಯವಿಲ್ಲ. ಅದರಂತೆಯೇ ಗುರುವಿನ ಮನಸ್ಸಿನ ಅಲೆಗಳು ವಿದ್ಯಾರ್ಥಿಯ ಮನಸ್ಸಿಗೆ ಹೋಗಿ ಮುಟ್ಟಬೇಕಾದ್ದಲ್ಲಿ ಗುರುವಿನ ಆ ಶಕ್ತಿ ಇರಬೇಕು.

ಅದು ಶಕ್ತಿಕ್ಷೇಪಣೆಯ ಪ್ರಶ್ನೆ. ಕೇವಲ ನಮ್ಮ ಬೌದ್ಧಿಕ ಶಕ್ತಿಗಳಿಗೆ ಚಾಲನೆ ಕೊಡುವುದಷ್ಟೇ ಅಲ್ಲ. ವಾಸ್ತವಿಕವಾದ ಮತ್ತು ಅನುಭವಕ್ಕೆ ಬರುವಂತಹ ಒಂದು ಶಕ್ತಿ ಗುರುವಿನಿಂದ ಶಿಷ್ಯನಿಗೆ ಪ್ರಾಪ್ತವಾಗುತ್ತದೆ. ಮತ್ತು ಶಿಷ್ಯನ ಹೃದಯದಲ್ಲಿ ಅದು ವೃದ್ಧಿಗೊಳ್ಳುತ್ತಾ ಹೋಗುತ್ತದೆ. ಆದ್ದರಿಂದ ಗುರುವಿನ ಅಂತರಂಗ ಅತ್ಯಂತ ಶುದ್ಧವಾಗಿರಬೇಕಾದುದೂ ಅತ್ಯಾವಶ್ಯಕ.

– ಸ್ವಾಮಿ ವಿವೇಕಾನಂದ

# ಜೀವನ ಮೌಲ್ಯಗಳ ಕಾರ್ಯಾಗಾರಕ್ಕಾಗಿ ಆಗ್ರಹ



**ಶ್ರೀ ಶಿವಾನಂದ ಸಿಂಧನಕೇರಾ**
**ಪ್ರಾಂತ್ಯ ಪ್ರಧಾನ ಕಾರ್ಯದರ್ಶಿ**

ಶಾಶ್ವತ ಜೀವನ ಮೌಲ್ಯಗಳ ಬಗೆಗೆ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡುವುದು ಈಗಿನ ತುರ್ತು ಅಗತ್ಯ. ಜೀವನ ಮೌಲ್ಯಗಳ ಪತನವೇ ಎಲ್ಲಾ ಗೊಂದಲಗಳಿಗೂ ಮೂಲವಾಗಿದೆ. ಎ.ಬಿ.ಆರ್.ಎಸ್.ಎಂ. ಕೂಡ ಈ ಬಗ್ಗೆ ಎರಡು ವರ್ಷಗಳಿಂದಲೂ ಚಿಂತನೆ ನಡೆಸಿದೆ. ಶಿಕ್ಷಣ ಪದ್ಧತಿಯಲ್ಲಿ ಈಗ ಅಳವಡಿಸಿರುವ ಸಿ.ಸಿ.ಇ. ಹಾಗೂ ಜೀವನ ಮೌಲ್ಯ ಬೇರೆಬೇರೆಯಲ್ಲ. ಆದ್ದರಿಂದ ಜೀವನ ಮೌಲ್ಯಗಳಿಗೆ ಹೆಚ್ಚು ಒತ್ತುಕೊಡಬೇಕಾಗಿದೆ. ಈ ದೃಷ್ಟಿಯಿಂದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಜಿಲ್ಲಾ ಘಟಕಗಳೂ ಶಾಶ್ವತ ಜೀವನ ಮೌಲ್ಯ ಕುರಿತು ಒಂದಾದರೂ ಕಾರ್ಯಕ್ರಮವನ್ನು 2015 ರ ಜನವರಿ ತಿಂಗಳ ಒಳಗಾಗಿ ನಡೆಸಬೇಕೆಂದು ತುಮಕೂರಿನ ದೇವರಾಯನ ದುರ್ಗದಲ್ಲಿ 23–11–2014 ರಂದು ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಪ್ರಾಂತೀಯ ಸಹ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲರು ಆಗ್ರಹಪೂರ್ವಕವಾಗಿ ಒತ್ತಾಯಿಸಿದರು. ಕಾರ್ಯಾಗಾರದ ಅಗತ್ಯತೆಯ ಬಗೆಗೆ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರ ಧ್ವನಿಗೂಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಸಂರಕ್ಷಕರಾದ ಪ್ರೊ॥ ಕೃ. ನರಹರಿಯವರು ಶಿಕ್ಷಕರು ಪಾಠಗಳ ಜೊತೆಗೇ ಮೌಲ್ಯವನ್ನೂ ಕಲಿಸಬೇಕು. ಶಿಕ್ಷಕರಿಗೆ ರಾಷ್ಟ್ರೀಯ, ಸಾಮಾಜಿಕ ದೃಷ್ಟಿಕೋನ ಇರಬೇಕು ಎಂದು ನುಡಿದರು. ನಂತರ ಮಾತನಾಡಿದ ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಾಲಕೃಷ್ಣಭಟ್ ಜೀವನ ಮೌಲ್ಯಗಳ ಮಹತ್ವವನ್ನು ತಿಳಿಸಿ, ಈ ಕಾರ್ಯಾಗಾರಗಳ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ 12 ರಂದು ಕಾರ್ಯಕರ್ತರು ಶಾಲೆಗಳಲ್ಲಿ 'ವಿವೇಕ ಕಂಕಣ' ಕಾರ್ಯಕ್ರಮವನ್ನು ನಡೆಸುವಂತೆ ಶ್ರೀ ಶಿವಾನಂದ ಸಿಂಧನಕೇರ ಸಲಹೆ ನೀಡಿದರು. 'Be good; Do good ವಿಚಾರದ ಅಡಿಯಲ್ಲಿ 2015ರ ಜನವರಿ 26 ರ ಒಳಗೆ ಒಳ್ಳೆಯ ಕಾರ್ಯವನ್ನು ಮಾಡಬೇಕು. ಜನವರಿ 26 ರಂದು ಭಾರತ ಮಾತಾ ಪೂಜಾ ಕಾರ್ಯಕ್ರಮವನ್ನು ಏರ್ಪಡಿಸುವಂತೆ ಸೂಚಿಸಿದರು.

ಪ್ರಾಂತೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರರು ಮಾತನಾಡಿ ಶಿಕ್ಷಕ ಸಂಘದ ಬೆಳವಣಿಗೆ ಪದಾಧಿಕಾರಿಗಳ, ಕಾರ್ಯಕರ್ತರ ಪ್ರವಾಸದಿಂದ ಮಾತ್ರ ಸಾಧ್ಯ. ಸಂಘದ ಸುದ್ದಿ, ಕಾರ್ಯಕ್ರಮಗಳನ್ನು ಎಲ್ಲಾ ಶಿಕ್ಷಕರಿಗೂ ತಿಳಿಸಬೇಕು ಎಂದು ಮನವಿ ಮಾಡಿದರು. ಪ್ರವಾಸ ಸಮಯದಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ತಿಳಿಸಲಾಯಿತು. ಮುಂಬರುವ ದಿನಗಳಲ್ಲಿ ಸಂಕಲ್ಪ ದಿನಾಚರಣೆ (ಜನವರಿ 12 ರಿಂದ 26ರ ಅವಧಿಯಲ್ಲಿ) ಯನ್ನು ಎಲ್ಲಾ ಜಿಲ್ಲೆ, ತಾಲೂಕುಗಳಲ್ಲಿ ನಡೆಸುವಂತೆ ಸೂಚಿಸಿದರು. ಹೊಸ ವರ್ಷ ಯುಗಾದಿಯ ಆಚರಣೆ, ಮಹತ್ವವನ್ನು ತಿಳಿಸುವ ಶುಭಾಶಯ ಪತ್ರ ಅಥವಾ ಸಂದೇಶವನ್ನು ಗೆಳೆಯರಿಗೆ, ಶಿಕ್ಷಕರಿಗೆ 21 ಮಾರ್ಚ್ 2015 ಯುಗಾದಿಯಂದು ಕಳುಹಿಸುವಂತೆ ಕೋರಿದರು. ಇದಲ್ಲದೆ ಜಿಲ್ಲೆಗಳಲ್ಲಿ ಶೈಕ್ಷಣಿಕ ಕಾರ್ಯಾಗಾರ ಗಳನ್ನು ನಡೆಸಬೇಕಾಗಿ ಸೂಚಿಸಿದರು.

ಎ.ಬಿ.ಆರ್.ಎಸ್.ಎಂ. ನ ಮಹಿಳಾ ವಿಭಾಗದ ಕಾರ್ಯದರ್ಶಿಗಳಾದ ಶ್ರೀಮತಿ ಆರ್. ಸೀತಾಲಕ್ಷ್ಮಿಯವರು ಮಾತನಾಡಿ ಸಂಘದಲ್ಲಿ ಶಿಕ್ಷಕಿಯರ ಸಂಖ್ಯೆ ಹೆಚ್ಚಾಗಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು. ಈ ಬಗ್ಗೆ ಎ.ಬಿ.ಆರ್.ಎಸ್.ಎಂ ನಲ್ಲೂ ಚಿಂತನೆ ನಡೆದಿರುವ ಬಗ್ಗೆ ಮಾಹಿತಿ ನೀಡಿದರು.

ಶಿಕ್ಷಕ ಸಮಾಚಾರವು ಶಿಕ್ಷಕ ಸಂಘದ ಮುಖವಾಹಿನಿಯಾಗಿದ್ದು ಸಂಘದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳ ಬಗೆಗೆ ಶಿಕ್ಷಕ ಸಂಘಕ್ಕೆ ಕೂಡಲೇ ಜಿಲ್ಲಾ ಪದಾಧಿಕಾರಿಗಳು ವರದಿಯನ್ನು ಕಳುಹಿಸಿಕೊಡುವಂತೆ ಕೋರಿದರು. ಪತ್ರಿಕೆಯ ಅಭಿವೃದ್ಧಿಗಾಗಿ ಚಂದಾದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಿಸಬೇಕೆಂದು ಶ್ರೀ ಹೆಚ್. ನಾಗಭೂಷಣ ರಾವ್ ಹಾಗೂ ಸಂಪಾದಕರು ಮನವಿ ಮಾಡಿದರು.

ಎಂ.ಎಲ್.ಸಿ. ಹಾಗೂ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ಅರುಣ ಶಹಾಪೂರರು ಸದಸ್ಯರ, ಶಿಕ್ಷಕರ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರವನ್ನು ಸೂಚಿಸಿದರು. ಸಂಘದ ಅಧ್ಯಕ್ಷರಾದ ಮಾಜಿ ಎಂ.ಎಲ್.ಸಿ ಶ್ರೀ ಕೆ. ಬಾಲಕೃಷ್ಣಭಟ್ಟರು ಸಮಾರೋಪದ ನುಡಿಗಳಲ್ಲಿ ಕಾರ್ಯಕರ್ತರನ್ನು ಉತ್ತೇಜಿಸುವ ಮಾತನಾಡಿದರು. ಶ್ರೀ ಕೊಟ್ರಪ್ಪನವರ ಸ್ವಾಗತದೊಂದಿಗೆ ಆರಂಭವಾದ ಸಭೆ ಶ್ರೀ ಚಿದಾನಂದ ಪಾಟೀಲರ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

●

➢ ಪುಟ 4 ರಿಂದ..... ವಿದ್ವತ್ ಗೋಷ್ಠಿ

ತೋರುವುದಿಲ್ಲ. ಆದ್ದರಿಂದ ಶಿಕ್ಷಣ ಸಂಬಂಧಿತ ಹಾಗೂ ಶಿಕ್ಷಣೇತರ ಸಂಘ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರಲು ಪ್ರಯತ್ನಿಸಬೇಕು. ಫಿನ್‌ಲ್ಯಾಂಡ್‌ನಲ್ಲಿ ಆಧುನಿಕ ಶಿಕ್ಷಣದ ಜೊತೆಜೊತೆಗೆ ವ್ಯಕ್ತಿತ್ವ ನಿರ್ಮಾಣಕ್ಕೆ ಅವಶ್ಯಕವಾದ ಅರಿವನ್ನು ನೀಡಲಾಗುತ್ತದೆ. ಆದ್ದರಿಂದಲೇ ಆ ದೇಶ ಅಷ್ಟೊಂದು ವೇಗವಾಗಿ ಮುಂದುವರಿಯುತ್ತಿದೆ. ವಿದೇಶದಲ್ಲಿ ಕಲಿತು ಬರುವುದಕ್ಕಿಂತ ಸ್ವದೇಶದಲ್ಲಿಯೇ ಶಿಕ್ಷಣ ನೀಡುವಂತಹ ಸಂಪನ್ಮೂಲ ವ್ಯಕ್ತಿಗಳು ಭಾರತದಲ್ಲಿ ತಯಾರಾಗಬೇಕೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘ ಸಂಚಾಲಕರಾದ ಮೋಹನ್ ಜೀ ಭಾಗವತ್‌ರವರು ಸಭೆಗೆ ತಿಳಿಸಿದರು.

ಎರಡನೇ ದಿನದ ಮೊದಲನೇ ಅಧಿವೇಶನದಲ್ಲಿ ಇಂದುಮತಿ ಕಾಟಧರೆಯವರು ರಾಷ್ಟ್ರೀಯ ಶಿಕ್ಷಣ ಆಂದೋಲನದ ಇತಿಹಾಸ ಮತ್ತು ಅದರ ಸಂಕೇತವೆಂಬ ವಿಷಯದ ಬಗ್ಗೆ ಮಾತನಾಡುತ್ತಾ 'ಭಾರತದಲ್ಲಿ ಶಿಕ್ಷಣ ಕ್ಷೇತ್ರ ನಡೆದು ಬಂದ ದಾರಿ, ಆದ ಬದಲಾವಣೆಗಳು, ಅವಶ್ಯಕವಾಗಿ ಆಗಬೇಕಾಗಿರುವ ಬದಲಾವಣೆಗಳ ಬಗ್ಗೆ ಸವಿಸ್ತಾರವಾಗಿ' ತಿಳಿಸಿದರು.

ನಂತರದ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ದಿವ್ಯಾಂಶುಬಾಯಿ ದುಬೆ ಮತ್ತು ಮಾನನೀಯ ಅನಿರುದ್ಧ ಜೀ ದೇಶಪಾಂಡೆ, ಮಹೇಶ್ ಚಂದ್ರಶರ್ಮ ಎಂಬ ಸಂಪನ್ಮೂಲ ವ್ಯಕ್ತಿಗಳು ರಾಷ್ಟ್ರೀಯ ಶಿಕ್ಷಣದ ಬಗ್ಗೆ ಚಿಂತನೆಯನ್ನು ನಡೆಸಿದರು. ಅದರಲ್ಲಿ ಏಕಾತ್ಮ ದೃಷ್ಟಿಯ ಅವಶ್ಯಕತೆಯನ್ನು ಕುರಿತು ತಿಳಿಸಿದರು. ಸಮಾಜದ ಸಂಘಟನೆಗೆ ಇದು ಅಗತ್ಯವೆಂಬ ಅಂಶವನ್ನು ಸ್ಪಷ್ಟಪಡಿಸಿದರು. 'ಏಕಾತ್ಮತಾ ದೃಷ್ಟಿ, ಅಧಿಷ್ಠಾನ, ಶಿಕ್ಷಾ ಪ್ರಕ್ರಿಯೆ ಮತ್ತು ಶಿಕ್ಷಾವ್ಯವಸ್ಥೆ' ಎಂಬ ಮೂರು ಹಂತಗಳಲ್ಲಿ ನಡೆಯಬೇಕೆಂದು ತಿಳಿಸಿದರು. ನಂತರ ಕೊನೆಯ ಅವಧಿಯ ಗೋಷ್ಠಿಯಲ್ಲಿ ಭಾಗವಹಿಸಿದ ವಿದ್ವಾಂಸರು ರಾಷ್ಟ್ರೀಯ ಶಿಕ್ಷಣದ ಬಗ್ಗೆ ತಮಗಿರುವ ಅಭಿಪ್ರಾಯವನ್ನು ತಿಳಿಸಿದರು. ಕೊನೆಯಲ್ಲಿ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ಸರ ಸಂಘ ಸಂಚಾಲಕರಾದ ಮೋಹನ ಜೀ ಭಾಗವತ್‌ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಎಲ್ಲಾ ವಿದ್ವಾಂಸರು ಸೇರಿ ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಬದಲಾವಣೆ ತಂದು ರಾಷ್ಟ್ರೀಯ ಶಿಕ್ಷಣವನ್ನು ಜಾರಿಗೆ ತರುವಲ್ಲಿ ಶ್ರಮಿಸಬೇಕೆಂದು ತಿಳಿಸಿದರು.

●

➢ ಪುಟ 6 ರಿಂದ..... ಬಿಡುಗಡೆಯ ಹಾದಿ

ಇದೇ ರೀತಿ ಡಾ॥ ಎಚ್. ನರಸಿಂಹಯ್ಯನವರು (ನಾನು ಕಲಿಸುತ್ತಿದ್ದ ಶಾಲೆಯ ಅಧ್ಯಕ್ಷರಾಗಿದ್ದವರು) ಜೀವನ ಪೂರ್ತಿ ದೇಶ, ಸಮಾಜಸೇವೆಯ ವ್ರತತೊಟ್ಟ ಸರಳ ಜೀವನ ನಡೆಸಿ ನೂರಾರು ಜನರಿಗೆ ಮಾರ್ಗದರ್ಶಕರಾಗಿದ್ದರು. ಅವರೂ ಸಹ ತಮ್ಮ ಬದುಕಿಗೆ ದಾರಿ ತೋರಿದವರು ತಮ್ಮ ಶಾಲಾ ಅಧ್ಯಾಪಕರೆಂದು ಪದೇ ಪದೇ ನಮಗೆ ಹೇಳುತ್ತಿದ್ದರು. ಅಧ್ಯಾಪಕರಾದವರು ವೈಯಕ್ತಿಕ ಚಾರಿತ್ರ್ಯ ಹಾಗೂ ರಾಷ್ಟ್ರೀಯ ಚಾರಿತ್ರ್ಯವನ್ನು ಮಕ್ಕಳ ಹೃದಯದಲ್ಲಿ ಬಿತ್ತಬೇಕು. ನಾನೊಬ್ಬನೇ ಅಲ್ಲ, ನನ್ನ ಸಮಾಜವೂ ಉನ್ನತಿಗೇರಬೇಕು. ನನ್ನ ದೇಶ ಅಭಿವೃದ್ಧಿಗೊಳ್ಳಬೇಕು ಎಂಬ ಮಾನಸಿಕತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು.

ಇಂಥಾ ಧನಾತ್ಮಕ ದೇಶಭಕ್ತಿ, ದೇಶಪ್ರೇಮ ಮಾತ್ರ ವ್ಯಕ್ತಿಯನ್ನು ಬದಲಿಸಬಲ್ಲದು. ಅದಕ್ಕಾಗಿ ನಾವೆಲ್ಲ ಶಿಕ್ಷಕರು ಪ್ರಯತ್ನಿಸಬಹುದಲ್ಲವೇ?

●

➢ ಪುಟ 5 ರಿಂದ..... ವಿವೇಕಾನಂದರ ಕನಸು

ಮರೆಯುವುದಷ್ಟೇ ಅಲ್ಲದೇ ನೈತಿಕ ಮೌಲ್ಯಗಳನ್ನೂ ಕಳೆದುಕೊಂಡು ಪಶುಗಳಂತೆ ವರ್ತಿಸುತ್ತಿರುವುದು ನಿಜಕ್ಕೂ ಆತಂಕಕಾರಿ. ಸಂಸ್ಕಾರದ ಬೇರುಗಳನ್ನು ಮಕ್ಕಳಲ್ಲಿ ನೆಡುವುದನ್ನೇ ನಾವು ಮರೆತಿದ್ದೇವೆ. ಇದು ಬದಲಾಗಿ, ಪ್ರತಿಯೊಬ್ಬರಲ್ಲೂ ನೈತಿಕತೆಯ ಉದ್ದೀಪನವಾಗಬೇಕು. ಮೂಲೆಗುಂಪಾಗಿರುವ ಸಾಂಸ್ಕೃತಿಕ ಗ್ರಂಥಗಳು ಪುನರುಜ್ಜೀವನ ಪಡೆದುಕೊಳ್ಳಬೇಕು.

ಮೂರನೆಯ ಕನಸೆಂದರೆ, ಹೊಸ ಹೊಸ ಜ್ಞಾನದ ಬೆಳವಣಿಗೆ. ಅಮೇರಿಕಾ, ಯುರೋಪ್ ಗಳನ್ನು ಸುತ್ತಿದ್ದ ಸ್ವಾಮೀಜಿಗಳು ಅಲ್ಲಿ ಮೇಲೆದ್ದಿದ್ದ ವೈಜ್ಞಾನಿಕ ಪ್ರಗತಿಯನ್ನು ನೋಡಿದ್ದರು. ಹೀಗಾಗಿ, ಭವಿಷ್ಯದಲ್ಲಿ ಈ ದೇಶಗಳ ಜೊತೆ ಸ್ಪರ್ಧಿಸಬೇಕಾದರೆ, ವಿಜ್ಞಾನದ ಪ್ರಗತಿಯ ಅವಶ್ಯಕತೆಯನ್ನು ಅವರು ಅರಿತಿದ್ದರು. ಅದರ ಫಲವಾಗಿ ತಲೆಯೆತ್ತಿರುವ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ನೋಡಿದಾಗಲೇ ಜ್ಞಾನದ ಬಗ್ಗೆ ಅವರಿಗಿದ್ದ ಹಂಬಲದ ಅನುಭವವಾಗುತ್ತದೆ.

ಎಲ್ಲ ಧಾರ್ಮಿಕ ವೈರುಧ್ಯಗಳನ್ನೂ ಮೀರಿ, ಏಕತೆಯಿಂದ ಭಾರತೀಯರೆಲ್ಲರೂ ಒಟ್ಟಾಗಿ ದುಡಿಯಬೇಕೆಂಬ ಅವರ ಕನಸು ಇನ್ನೂ ಕನಸಾಗೇ ಇರುವುದು ದುರಂತ. ಈ ಎಲ್ಲ ತಪ್ಪುಗಳನ್ನು ತಿದ್ದಿಕೊಂಡು ಸರಿದಾರಿಗೆ ಬರುವ ಹೊಣೆ ನಮ್ಮ ಮೇಲೆಯೇ ಇದೆ. ಇದು ಒಂದು ಸಾಮಾಜಿಕ ಕಾರ್ಯ. ಯಾರೋ ಒಬ್ಬರಿಂದ ನೆರವೇರುವುದಿಲ್ಲ. ಬಾಲ್ಯದಿಂದಲೇ ಸಂಸ್ಕಾರವನ್ನು, ಶುದ್ಧ ಚಾರಿತ್ರ್ಯವನ್ನು ಬಿತ್ತುವುದು ಪಾಲಕರ ಕರ್ತವ್ಯವಾದರೆ, ಶಿಕ್ಷಣದ ಮೂಲಕ ಸಾಮಾಜಿಕ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದು ಉಪನ್ಯಾಸಕರ ಕೈಯಲ್ಲಿದೆ. ಇದೆಲ್ಲವನ್ನೂ ಅಳವಡಿಸಿಕೊಂಡು, ಉನ್ನತ ರಾಷ್ಟ್ರದ ನನಸಿಗೆ ನಾವು ಶ್ರಮಪಡಬೇಕಿದೆ. 'ಒಬ್ಬ ಶಕ್ತ ವ್ಯಕ್ತಿಯ ನಿರ್ಮಾಣದಿಂದಲೇ ಶಕ್ತ ಸಮಾಜದ ನಿರ್ಮಾಣ ಸಾಧ್ಯ' ಎಂದು ವಿಶ್ವೇಶ್ವರಯ್ಯನವರು ಹೇಳಿದಂತೆ, ವ್ಯಕ್ತಿಗತವಾದ ಔನ್ನತ್ಯದ ಮೂಲಕ ನಾಡಿನ ಶ್ರೇಷ್ಠತೆಯತ್ತ ದಾಪುಗಾಲಿಡುವ ಸಂಕಲ್ಪವನ್ನು ಮಾಡೋಣ.

**ವಂದೇ ಮಾತರಂ..**


# ವಿದ್ಯಾರ್ಥಿ ಮಿತ್ರ – 14





## 1. ರಸಪ್ರಶ್ನೆ

1. 'ಭಾರತ ಸಿಂಧು ರಶ್ಮಿ' ಇದು ಯಾರ ಮಹಾ ಕಾವ್ಯ?
2. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತದ್ದು ಯಾವಾಗ?
3. ಕನ್ನಡ ಭಾಷೆಯ ಲಿಪಿಯನ್ನು ಹೋಲುವ ಭಾರತೀಯ ಭಾಷೆ ಯಾವುದು?
4. 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾದವರು ಯಾರು?
5. 'ಚೋರಪಾಲಕ ಚರಿತ' ಕೃತಿಯ ಕರ್ತೃ ಯಾರು?
6. ಕುಮಾರವ್ಯಾಸನ 'ಕರ್ನಾಟ ಭಾರತ ಕಥಾಮಂಜರಿ' ಯಾವ ಷಟ್ಪದಿಯಲ್ಲಿದೆ?
7. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಪಡೆದವರು ಯಾರು?
8. ಆಧುನಿಕ ರಂಗಭೂಮಿಯ ಹರಿಕಾರರೆಂದು ಕರೆಯುವ ನಾಟಕಕಾರ ಯಾರು?
9. ವ್ಯಾಕರಣದಲ್ಲಿ 'ಯತಿ' ಎಂದರೆ ಏನು ?
10. 'ಬಂಡ್ವಾಳ್ವಿಲ್ಲದ ಬಡಾಯಿ' ನಾಟಕವನ್ನು ಬರೆದವರು?
11. ಕನ್ನಡ ಸಾಹಿತ್ಯದ ಕೊಡುಗೆಗೆ 1998 ರಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಯಾರು ಸ್ವೀಕರಿಸಿದರು?
12. 'ಕಾಕನಕೋಟೆ' ಇದರ ಕರ್ತೃ?
13. ಚುನಾವಣೆ ಗುರುತಿನ ಚೀಟಿ ಬಳಸಿದ ಭಾರತದ ಮೊದಲ ರಾಜ್ಯ ಯಾವುದು?
14. 'ತ್ರಿವಿಕ್ರಮರ ಆಕಾಶಗುಂಟೆ' ಎಂಬ ಕವನ ಸಂಕಲನವನ್ನು ಬರೆದವರು ಯಾರು ?
15. ಬದುಕಲು ಕಲಿಯಿರಿ ಕೃತಿಯ ಲೇಖಕರು ಯಾರು?
16. ಕೆ.ವಿ. ಸುಬ್ಬಣ್ಣರವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದು ಕೊಟ್ಟ ಕೃತಿ ಯಾವುದು?
17. 'ತಮಿಳು ತಲೆಗಳ ನಡುವೆ' ಯನ್ನು ಬರೆದವರು?
18. 'ಸಂಜೆ ಐದರ ಮಳೆ' ಕವನ ಸಂಕಲನವನ್ನು ಬರೆದವರು?
19. ದಾನಚಿಂತಾಮಣಿ ಎಂದು ಯಾರನ್ನು ಕರೆಯುತ್ತಾರೆ ?
20. ಅಭಿನವ ಪಂಪ ಎಂದು ಯಾರನ್ನು ಕರೆಯುತ್ತಾರೆ ?

## 2. ಇವುಗಳು ಯಾವ ದೇಶಗಳ ನಕ್ಷೆಗಳೆಂದು ಹೇಳಬಲ್ಲಿರಾ ?

1


2


3


4


## ವಿದ್ಯಾರ್ಥಿ ಮಿತ್ರ – 13 ರ ಉತ್ತರ

**1. ರಸಪ್ರಶ್ನೆ** : 1) ಭೀಷ್ಮ ಪರ್ವ, 2) 1956, ವಿಶಾಲ ಮೈಸೂರು, 3) 1973, ನವೆಂಬರ್ 1, 4) ಮಂಡ್ಯ, 5) ಕೊಡಗು, 6) ಬಿ.ಎಲ್.ರೈಸ್, 7) 1904, ಶಿವನ ಸಮುದ್ರ, 8) ದಕ್ಷಿಣ ಕನ್ನಡ, 9) ಕೆ.ಶೇಷಾದ್ರಿ ಅಯ್ಯರ್ ಅವರು, ಶಿವನ ಸಮುದ್ರದಲ್ಲಿ 1902ರಲ್ಲಿ ಆರಂಭಿಸಿದರು., 10) ಮಂಡ್ಯ ಜಿಲ್ಲೆ–ಮೇಲುಕೋಟೆಯಲ್ಲಿ, 11) ಚಿತ್ರದುರ್ಗ ಜಿಲ್ಲೆ– ಇಂಗರದಾಳು, 12) ಚಿಕ್ಕಮಗಳೂರು ಜಿಲ್ಲೆ – ಕುದುರೆಮುಖದ ಬಳಿ ಇರುವ ಆರೋಳಿ, 13) ಮೈಸೂರು ಜಿಲ್ಲೆ – ನಂಜನಗೂಡು ಶ್ರೀಕಂಠೇಶ್ವರ ದೇವಾಲಯ, 14) ಹರ್ಡಿಕರ್ ಮಂಜಪ್ಪ, 15) ಅನಿಕೇತನ, 16) ಇಟಗಿಯ ಮಹಾದೇವ ದೇವಾಲಯ, 17) ಕೆ.ವಿ.ಪುಟ್ಟಪ್ಪ, 18) ಬೆನಗಲ್ ರಾಮರಾವ್, 19) ಶಿವಮೊಗ್ಗ ಜಿಲ್ಲೆಯ ಶ್ರೀರಾಮಪುರ ಮಠದಲ್ಲಿ, 20) ಕೆಮ್ಮಣ್ಣ ಗುಂಡಿ ಕೃಷ್ಣ ರಾಜೇಂದ್ರ ಗಿರಿಧಾಮ, 21) ಮಲಪ್ರಭ ನದಿಗೆ, 22) ಚರಣ್ ಸಿಂಗ್, 23) ಗರಳಪುರಿ, 24) ಬನವಾಸಿ, 25) ಶ್ರವಣ ಬೆಳಗೊಳದಲ್ಲಿ

**2. ಊರುಗಳ ಹೆಸರುಗಳು :** 1) ಅಸ್ಸಾಂ, 2) ಮಣಿಪುರ, 3) ಕೇರಳ, 4) ಪಂಜಾಬ್

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಸಾಧಕರನ್ನು ಸ್ಮರಿಸೋಣ

'ವಿವಿಧತೆಯಲ್ಲಿ ಏಕತೆ' ಎಂಬ ಘೋಷವಾಕ್ಯದಲ್ಲಿ ನಮ್ಮ ದೇಶದ ಹಿರಿಮೆಯನ್ನು ಅಷ್ಟೇ ಅಲ್ಲ, ಆ ವೈವಿಧ್ಯದ ಪ್ರತಿಯೊಂದು ಅಂಶವೂ ತನ್ನದೇ ಆದ ಅನೇಕ ವೈಶಿಷ್ಟ್ಯಗಳಿಂದಲೇ ಕೂಡಿದೆಯೆಂಬುದೂ ಸತ್ಯ. ನಮ್ಮ ಭಾರತೀಯ ಸಂಸ್ಕೃತಿ, ಸಾಹಿತ್ಯ, ಕಲೆ, ಸಂಗೀತ, ವಿಜ್ಞಾನ ಎಂಬ ಹತ್ತು ಹಲವು ಕ್ಷೇತ್ರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳು, ಸಾಧಕರು ದೇಶದ ಉದ್ದಗಲಕ್ಕೂ ವ್ಯಾಪಿಸಿಕೊಂಡಿದ್ದಾರೆ. ದೇಶವನ್ನು ಸರ್ವಾಂಗೀಣವಾಗಿ ಶ್ರೀಮಂತಗೊಳಿಸಿದ್ದಾರೆ. ದೇಶದ ಕೀರ್ತಿಯನ್ನು ಮೆರೆಸಿದ್ದಾರೆ. ಹಿಂದಣ 'ಹೆಜ್ಜೆಯನರಿತಲ್ಲದೆ ಮುಂದಿನ ಹೆಜ್ಜೆಯನಿಡಲಾಗದು' ಎಂಬ ಕವಿವಾಣಿಯಂತೆ ಅಂತಹ ಹಿರಿಯರ ಸಾಧನೆಯನ್ನು ಸ್ಮರಿಸಿ ಪ್ರೇರಣೆ, ಸ್ಫೂರ್ತಿ ಪಡೆಯುವುದು ಅವಶ್ಯವಾಗಿದೆ. ಆ ನಿಟ್ಟಿನಲ್ಲಿ ಇದೀಗ ಡಿಸೆಂಬರ್, ಜನವರಿ ತಿಂಗಳಲ್ಲಿ ನಾವು ಸ್ಮರಿಸಲೇಬೇಕಾದ ಮಹಾನ್ ವ್ಯಕ್ತಿಗಳ ಕಿರುಪರಿಚಯ ಇಲ್ಲಿದೆ.

ಇದೇ ಜನವರಿ ಹತ್ತರಂದು ತ್ಯಾಗರಾಜರ ಆರಾಧನೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಅಪ್ರತಿಮ ವಾಗ್ಗೇಯಕಾರರೂ, ಸಂತರೂ ಎನಿಸಿಕೊಂಡ ತ್ಯಾಗರಾಜರ ಆರಾಧನೆ. ತಮಿಳುನಾಡಿನ ತಂಜಾವೂರು ಜಿಲ್ಲೆಯ ತಿರುವೈಯೂರು ಎಂಬ ಪುಣ್ಯಕ್ಷೇತ್ರ ಸಾಕ್ಷಾತ್ ಗಂಧರ್ವ ಲೋಕವೇ ಆಗಿಬಿಡುತ್ತದೆ. ದೇಶದ ನಾನಾ ಭಾಗಗಳಿಂದ ಆಗಮಿಸುವ ಕರ್ನಾಟಕ ಶಾಸ್ತ್ರೀಯ ಸಂಗೀತದ ವಿದ್ವಾಂಸರ ಸಂಗೀತಸೇವೆ ಕಾವೇರೀ ನದೀ ತೀರದಲ್ಲಿರುವ ಸಂತ ತ್ಯಾಗರಾಜರ ಸಮಾಧಿಯ ಸನ್ನಿಧಿಯಲ್ಲಿ ಐದು ದಿನಗಳ ಕಾಲ ನಿರಂತರವಾಗಿ ನಡೆಯುತ್ತದೆ. ಸಂಗೀತ ಕ್ಷೇತ್ರದಲ್ಲಿ ಅಮೂಲ್ಯವೂ, ವಿಶಿಷ್ಟವೂ ಆದ ಸ್ಥಾನ ಪಡೆದುಕೊಂಡಿರುವ ತ್ಯಾಗರಾಜರ ಗೌರವಾರ್ಥ ನಡೆಯುವ ಈ ಉತ್ಸವದಲ್ಲಿ ಪಾಲ್ಗೊಳ್ಳಲು ಸ್ವಇಚ್ಛೆಯಿಂದ ನೂರಾರು ವಿದ್ವಾಂಸರು ಹಾತೊರೆದು ಬರುತ್ತಾರೆ.

ತ್ಯಾಗರಾಜರ ಪ್ರಮುಖ ರಚನೆಗಳಿಂದ ಆಯ್ದ 'ಪಂಚರತ್ನ' ಗಳೆಂಬ ಕೃತಿಗಳನ್ನು ಸಾಮೂಹಿಕವಾಗಿ ಗಾಯನದ ಮೂಲಕ, ವಾದ್ಯ ಸಂಗೀತದ ಮೂಲಕ ಸಂಗೀತ ಸೇವೆಯನ್ನು ಸಲ್ಲಿಸಿ ಕೃತಾರ್ಥರಾಗುತ್ತಾರೆ. ನಂತರ ಅವರ ಇತರ ಕೃತಿಗಳನ್ನು ಹಾಡಲಾಗುತ್ತದೆ. ಸಂಗೀತದ ಮೂಲಕವೇ ತಮ್ಮ ಆರಾಧ್ಯದೈವ ಶ್ರೀರಾಮಚಂದ್ರನ ಅಖಂಡ ಸ್ಮರಣೆಯಲ್ಲಿಯೇ ಬದುಕಿನ ಸಾರ್ಥಕತೆಯನ್ನು ಕಂಡ ತ್ಯಾಗರಾಜರ ಈ ಆರಾಧನಾ ಮಹೋತ್ಸವ ಇಡೀ ಪರಿಸರದಲ್ಲಿ ದಿವ್ಯ ಸಂಗೀತ ಲೋಕವನ್ನೇ ಆ ದಿನಗಳಲ್ಲಿ ಸೃಜಿಸುತ್ತದೆ.

1767ರಲ್ಲಿ ತಂಜಾವೂರು ಜಿಲ್ಲೆಯ ತಿರುವಾರೂರಿನಲ್ಲಿ ರಾಮಬ್ರಹ್ಮ ಮತ್ತು ಸೀತಮ್ಮ ಎಂಬ ದಂಪತಿಗಳ ಮೂರನೆಯ ಮಗನಾಗಿ ಜನಿಸಿದವರು ತ್ಯಾಗಬ್ರಹ್ಮಂ ಅರ್ಥಾತ್ ನಂತರದಲ್ಲಿ ತ್ಯಾಗರಾಜರಾದವರು. ತಂದೆಯ ತಂದೆ ಗಿರಿರಾಜ ಕವಿ ಮತ್ತು ಸಂಗೀತಗಾರರಾಗಿದ್ದರೆ, ತಾಯಿಯ ತಂದೆ ಕಾಳಹಸ್ತಿ ವೀಣಾ ವಿದ್ವಾಂಸರಾಗಿದ್ದರು. ಅವರಿಂದಲೇ ಬಾಲಕ ತ್ಯಾಗಬ್ರಹ್ಮನಿಗೆ ವೀಣೆಯ ಪಾಠ. ಅವರ ಮರಣಾನಂತರ 'ನಾರದೀಯ' ಎಂಬ ಸಂಗೀತಶಾಸ್ತ್ರದ ಪುಸ್ತಕ ಪಡೆದ ಅದೃಷ್ಟ ಬಾಲಕನದಾಗಿತ್ತು. ನಂತರದ ಸಂಗೀತ ಶಿಕ್ಷಣ ದೊರಕಿದ್ದು ಸೊಂಟಿ ವೆಂಕಟರಮ್ಮಣಯ್ಯನವರಲ್ಲಿ. ಬಾಲ್ಯದಿಂದಲೂ ಸಂಗೀತವೆಂಬುದು ಭಗವಂತನ ಒಲುಮೆಗೆ ನೆರವಾಗುವ ದಾರಿಯೆಂಬುದೇ ಬಾಲಕನ ನಂಬಿಕೆಯಾಗಿತ್ತು. ಒಂಭತ್ತರ ವಯಸ್ಸಿನಲ್ಲಿಯೇ 'ನಮೋ ನಮೋ ರಾಘವಯ್ಯಾ' ಎಂಬ ದೇಶಿಕಾತೋಡಿ ರಾಗದ ಮೊದಲ ಕೃತಿ ಮನೆಯ ಗೋಡೆಗಳ ಮೇಲೆ ಅಕ್ಷರರೂಪ ತಳೆದಿತ್ತು. ಕೆಲವೇ ವರ್ಷಗಳ ನಂತರ ಒಮ್ಮೆ ತಿರುವನಂತಪುರದ ಪ್ರಸಿದ್ಧ ಸಂಗೀತಗಾರರಾದ ಷಟ್ಕಲ ಗೋವಿಂದಮಾರಾರ್ ಎಂಬುವರು ತಂಜಾವೂರಿಗೆ ಭೇಟಿ ನೀಡಿದಾಗ ಅವರೆದುರಿಗೆ ತ್ಯಾಗರಾಜರು ರಚಿಸಿ ಹಾಡಿದ್ದೇ 'ಎಂದರೋ ಮಹಾನುಬಾವುಲು' ಎಂಬ (ಪಂಚರತ್ನದ ಐದನೇ ಕೃತಿ) ಕೃತಿ, ಶಿಷ್ಯನ ಪ್ರತಿಭೆ ಮೆಚ್ಚಿ ಗುರು ವೆಂಕಟರಮಣಯ್ಯ ತಂಜಾವೂರಿನ ರಾಜನ ಬಳಿ ಪ್ರಸ್ತಾಪಿಸಿದಾಗ ರಾಜನಿಂದ ಉಡುಗೊರೆಯೊಂದಿಗೆ ಆಸ್ಥಾನಕ್ಕೆ ಬರಲು ಆಹ್ವಾನವು ಬಂದಿತ್ತು. ಲೌಕಿಕ ಸಂಪತ್ತನ್ನು ಎಂದೂ ಬಯಸದ ತ್ಯಾಗರಾಜರು ಆಹ್ವಾನ ನಿರಾಕರಿಸಿದ ಸಂದರ್ಭದಲ್ಲಿ ರಚಿಸಿದ್ದೇ 'ನಿಧಿಚಾಲಸುಖಮಾ' ಎಂಬ ಕೃತಿ. ಮಹಾರಾಜರ ಕರೆ ನಿರಾಕರಿಸಿದ್ದಕ್ಕೆ ಸಿಟ್ಟಾದ ತ್ಯಾಗರಾಜರ ಅಣ್ಣ ಆತ ಸದಾ ಆರಾಧಿಸುತ್ತಿದ್ದ ರಾಮ ವಿಗ್ರಹವನ್ನು ಕಾವೇರಿ ನದಿಗೆ ಬಿಸಾಡುತ್ತಾನೆ. ತನ್ನ ಪ್ರಭುವಿನ ಅಗಲಿಕೆಯ ನೋವನ್ನು ಸಹಿಸದೆ ತ್ಯಾಗರಾಜರು ಹಲವಾರು ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾ, ನೂರಾರು ಕೃತಿಗಳನ್ನು ರಚಿಸಿ ಸ್ತುತಿಸುತ್ತ ಹೊರಟರು. ಬಹುತೇಕ ರಾಮಸ್ತುತಿಯಾದರೂ ಕೆಲವು ತೀರ್ಥಕ್ಷೇತ್ರಗಳ ದೇವರಿಗೆ ಸಂಬಂಧಿಸಿದವಾಗಿದ್ದುವು. ದೇವರ ಮುಂದೆ ಕುಳಿತು ಮೈಮರೆತು ಹಾಡುತ್ತಿದ್ದರೆ ಹಿಂದೆ ಕುಳಿತಿರುತ್ತಿದ್ದ ಶಿಷ್ಯವೃಂದ ತಾಳೆಗರಿಗಳ ಮೇಲೆ ಬರೆದುಕೊಳ್ಳುತ್ತಿದ್ದರೆಂದು ಪ್ರತೀತಿ. ಹಾಗಾಗಿ 24,000 ಕೃತಿಗಳನ್ನು ರಚಿಸಿದರೆಂದು ತಿಳಿದುಬಂದರೂ ಲಭ್ಯವಾಗಿರುವುದು ಕೇವಲ ಏಳುನೂರು ಮಾತ್ರ.

ತ್ಯಾಗರಾಜರ ಕೃತಿಗಳ ವೈಶಿಷ್ಟ್ಯವೆಂದರೆ ಅವುಗಳ ವಿಭಿನ್ನ ಆಯಾಮಗಳು, ಸಂಗೀತಶಾಸ್ತ್ರ, ವೇದಾಂತದ ಅಂಶಗಳೊಂದಿಗೆ ಶಾಶ್ವತ ಸತ್ಯದ ದರ್ಶನವೂ ಹೊರಹೊಮ್ಮಿದೆ. ಭಕ್ತಿ ಮತ್ತು ಸಂಗೀತ ಅವರ ಕೃತಿಗಳಲ್ಲಿ ಒಂದು ನಾಣ್ಯದ ಎರಡು ಮುಖಗಳಂತೆ ಬೆಸೆದುಕೊಂಡಿವೆ. ಸಂಗೀತಶಾಸ್ತ್ರಕ್ಕೆ ಅವರ ಕೊಡುಗೆ ಅನನ್ಯ. ರಾಗಲಕ್ಷಣ, ರಾಗಲಕ್ಷ್ಯ, ರಾಗಸ್ವರೂಪಕ್ಕೆ ಅವರ ಕೊಡುಗೆ ಅನುಪಮ. ಸಂಗೀತಕೃತಿಗಳಲ್ಲದೆ ಎರಡು ಸಂಗೀತ ನಾಟಕಗಳನ್ನೂ ರಚಿಸಿದರೆಂದು ತಿಳಿದುಬರುತ್ತದೆ. ಅವು 'ಪ್ರಹ್ಲಾದ ಭಕ್ತಿ ವಿಜಯಂ' ಮತ್ತು 'ನೌಕಾಚರಿತಂ'. ಪ್ರಸಿದ್ಧವಾದ ಪಂಚರತ್ನ ಕೃತಿಗಳೆಂದರೆ ಜಗದಾನಂದಕಾರಕ, ದುಡುಕುಗಲ, ಸಾದಿಂಚಿನೆ, ಕನಕನರುಚಿರ ಮತ್ತು ಎಚಿದರೋಮಹಾನುಭಾವುಲು.

ಪುಟ 16 ಕ್ಕೆ ➢

➤ ಪುಟ 15 ರಿಂದ

## ಸಾಧಕರನ್ನು ಸ್ಮರಿಸೋಣ

ತ್ಯಾಗರಾಜರು ಜೀವಂತ ದಂತಕಥೆಯಾಗಿದ್ದವರು. ಅವರ ಪ್ರತಿ ಉಸಿರಿನಲ್ಲಿ ರಾಮಭಕ್ತಿ, ಪ್ರತಿಯೊಂದು ಕೃತಿ ಮನುಷ್ಯ ತನ್ನ ಅಂತಚಕ್ಷುವನ್ನು ತೆರೆಯಲು ಪ್ರೇರಣೆ ನೀಡುವಂತಹುದು. 1847ರಲ್ಲಿ ತಮ್ಮ ಆರಾಧ್ಯ ದೇವನ ಸನ್ನಿಧಿಯನ್ನು ಸೇರಿದ ತ್ಯಾಗರಾಜರನ್ನು ಕುರಿತು ಪ್ರಸಿದ್ಧ ವಿಮರ್ಶಕರೊಬ್ಬರ ಉದ್ಗಾರ ಹೀಗಿದೆ. 'ಅವರು ಭಕ್ತಿಯಲ್ಲಿ ಪ್ರಹ್ಲಾದ, ಸಂಗೀತದಲ್ಲಿ ನಾರದ, ವಾಕ್ಪಟುತ್ವದಲ್ಲಿ ವಾಲ್ಮೀಕಿ'.

1921ರಲ್ಲಿ ಬೆಂಗಳೂರಿನ ನಾಗರತ್ನಮ್ಮ ಎಂಬುವವರು (ಪ್ರಸಿದ್ಧ ದೇವಾಲಯ ನರ್ತಕಿ) ತ್ಯಾಗರಾಜರ ಸಮಾಧಿಯಿರುವ ಸ್ಥಳವನ್ನು ಖರೀದಿಸಿ, ದೇವಾಲಯವನ್ನು ಕಟ್ಟಿಸಿ, ತ್ಯಾಗರಾಜರ ಮೂರ್ತಿಯೊಂದನ್ನು ಸ್ಥಾಪಿಸಲು ತಮ್ಮೆಲ್ಲ ಸಂಪತ್ತನ್ನೂ ಮುಡಿಪಾಗಿಟ್ಟರು. ಅದೇ ಸ್ಥಳದಲ್ಲಿ 1941 ರಿಂದಲೂ ಪ್ರಸ್ತುತ ನಡೆಯುತ್ತಿರುವ ರೀತಿಯಲ್ಲಿ ಐದುದಿನಗಳ ಸಂಗೀತೋತ್ಸವ ನಡೆಯುತ್ತ ಬಂದಿದೆ. ತ್ಯಾಗರಾಜರ ಸಮಾಧಿಯ ಸಮೀಪವೇ ಬೆಂಗಳೂರು ನಾಗರತ್ನಮ್ಮನ ಸಮಾಧಿಯೂ ಇದೆ. ತ್ಯಾಗರಾಜರ ಆರಾಧನೆಯನ್ನು ವಿದೇಶಗಳಲ್ಲಿ ನೆಲೆಸಿರುವ ಭಾರತೀಯರು ಮಾಡುವುದುಂಟು.

**ಡಿಸೆಂಬರ್ 7, ತಾನ್‌ಸೇನ್ :–** ಕಾಲ 1493–1586. ಹಿಂದೂಸ್ತಾನೀ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಪ್ರಮುಖ ಗಾಯಕ, ರಚನಕಾರ ಮತ್ತು ಅಕ್ಬರ್ ಆಸ್ಥಾನದ 'ನವರತ್ನ' ಗಳಲ್ಲಿ ಒಬ್ಬನಾಗಿದ್ದ. 'ಮಿಯಾನ್' ಎಂದರೆ ಜ್ಞಾನಿ ಎಂಬ ಬಿರುದು ಪಡೆದು ದಂತಕಥೆಯಾಗಿದ್ದವನು.

**ಡಿಸೆಂಬರ್ 12, ಸವಾಯಿ ಗಂಧರ್ವ :–** ಜನನ 1886 ಜನವರಿ 19. ಹಿಂದೂಸ್ತಾನೀ ಶಾಸ್ತ್ರೀಯ ಸಂಗೀತದ 'ಕಿರಾಣಾ ಘರಾಣೆ'ಯಲ್ಲಿ ಅನೇಕ ವಿದ್ವಾಂಸರನ್ನು ರೂಪಿಸಿದವರು. ಭೀಮಸೇನ್ ಜೋಷಿ, ಗಂಗೂಬಾಯಿ ಹಾನಗಲ್ ಮುಂತಾದವರು ಇವರ ಶಿಷ್ಯ ಪ್ರಮುಖರು. ಪ್ರತಿವರ್ಷ ಡಿಸೆಂಬರ್ 2ನೇ ವಾರದಲ್ಲಿ ಇವರ ಹೆಸರಿನಲ್ಲಿ ಪೂನಾದಲ್ಲಿ ಅತಿದೊಡ್ಡ ಸಂಗೀತೋತ್ಸವ ನಡೆಯುತ್ತದೆ.

**ಡಿಸೆಂಬರ್ –22, ಗೊಂದಾವಲಿ ಮಹಾರಾಜ ಅಥವಾ ಬ್ರಹ್ಮಚೈತನ್ಯ ರಾಮದಾಸಿ ರಾಮಭಕ್ತ :** ಮಹಾರಾಷ್ಟ್ರದವರು. ದೇವರ ನಾಮಸ್ಮರಣೆಯಿಂದ ಮೋಕ್ಷವನ್ನು ಪಡೆಯಬಹುದೆಂದು ಸಾರಿದವರು. ಭಕ್ತಿಮಾರ್ಗದ ಪ್ರಚಾರಕ. 'ಶ್ರೀ ರಾಮ ಜಯರಾಮ ಜಯ ಜಯರಾಮ' ತಾರಕಮಂತ್ರ ಬೋಧಿಸಿದವರು.

**ಡಿಸೆಂಬರ್ – 22 ಶ್ರೀ ಗುರುಗೋವಿಂದ ಸಿಂಗ್ ಜನ್ಮದಿನ:** ಸಿಖ್ಖರ ಹತ್ತನೇ ಗುರುವಾಗಿದ್ದವರು. ಈತ ಒಬ್ಬ ಯೋಧ. ಕವಿ ಮತ್ತು ದಾರ್ಶನಿಕ. ಮೊಘಲರ ವಿರುದ್ಧ ಹೋರಾಡಲು ಸಿಖ್ಖರಿಗೆ ಶಸ್ತ್ರ ಹಿಡಿಯಲು ಪ್ರೇರಿಸಿ ಯೋಧ ಪಡೆ ಕಟ್ಟಿದವರು.

**ಡಿಸೆಂಬರ್–22 ಶಾರದಾ ದೇವಿ ಜಯಂತಿ:** ಶ್ರೀ ರಾಮಕೃಷ್ಣ ಪರಮ ಹಂಸರ ಆಧ್ಯಾತ್ಮ ಗುರು ಎಂದೆನಿಸಿಕೊಂಡ 'ಪರಮಪೂಜ್ಯಮಾತೆ' ಎಂದೇ ಎಲ್ಲೆಡೆ ಪರಿಚಿತರಾದವರು. ಸರಳತೆಯ ಪ್ರತೀಕವಾಗಿ ಬದುಕಿ, ಸ್ವಾಮಿ ವಿವೇಕಾನಂದರೂ ಸೇರಿದಂತೆ ರಾಮಕೃಷ್ಣ ಮಠದ ದೇಶ, ವಿದೇಶಗಳ ಭಕ್ತರಿಗೆ ಪೂಜನೀಯರಾದವರು.

– ನಂ. ನಾಗಲಕ್ಷ್ಮಿ

Registered No. RNI 45459/85
RNP/Ka/BGS-125/2012-14
Posted at Bangalore GPO
Bangalore -560 001

DECEMBER 2014
Date of Posting
20th or 21st of every month

**ಶಿಕ್ಷಣ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರೌಢಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕ ತರಬೇತಿ ಸಂಸ್ಥೆಗಳು (T.T.I.) ತಮ್ಮ ಗ್ರಂಥಾಲಯ ಅಥವಾ ಪ್ರಯೋಗಾಲಯ ನಿಧಿಯಿಂದ "ಅಖಿಲ ಕರ್ನಾಟಕ ಶಿಕ್ಷಣ ಸಮಾಚಾರ" ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495

Printed at : RASHTROTTHANA MUDRANALAYA, Bangalore - 560 019.

srushtidesigns@gmail.com